ಕೊರವಂಜಿ

ಸಂಪುಟ ೨೧ ನವೆಂಬರ್ ೧೯೫೯ ಸಂಚಿಕೆ ೮

ಕುಹಕಿಡಿಗಳು

ಹಿಂದೀ ಚೀಣಿ ಭಾಯಿ ಭಾಯಿ ಎಂದು ಅಂದು ಎದ್ದಿದ್ದ ಘೋಷಣೆ ಚೀಣಾ ರಷ್ಯದ ನಡುವೆ ಬಾಯಿ ಬಾಯಿ ಬಿಡಿಸುತ್ತಿದೆಯಂತೆ—

* * * *

ಬೆಳದಿಂಗಳೂಟ ಬಲು ಚೆನ್ನ ಅಂತ ಪ್ರಾಯದ ದಿನಗಳನ್ನು ಮುದುಕರು ಜ್ಞಾಪಿಸಿಕೊಂಡಾಗ ಸ್ನೇಹಿತ ಹೇಳಿದನಂತೆ "ಹೌದು ಹೌದು ಆ ಬೆಳಕಿನಲ್ಲಿ ಬರಿ ಅನ್ನವೂಕೂಡ ಚಿತ್ರಾನ್ನದ ಹಾಗೇ ಕಾಣಿಸುತ್ತಿತ್ತು" ಎಂದು.

* * * *

ತಲೆಮೇಲಿ ಚೀಣೀಯರನ್ನು ಕೂರಿಸಿಕೊಂಡಿದ್ದಕ್ಕೆ ಅಲ್ಲೇ ಅವರು ಝುಂಡಾ ಹೂಡಿಬಿಟ್ಟರು ಎನ್ನಬಹುದು.

* * * *

ಇದರಿಂದಲಾದರೂ ಪಾಕಿಸ್ಥಾನ್, ಭಾರತ, ಬರ್ಮಾ ಇವುಗಳ ನಡುವೆ ಒಕ್ಕೂಟವಾದರೆ ಚೆನ್ನ.

* * * *

ಚೌ ಎನ್ ಲೈ ಅವರಿಗೆ ಜ್ವರ ಬಂದು ಕಳವಳದ ಮಾತನ್ನಾಡುತ್ತಿದ್ದಾರಂತೆ

—'ಲೈ' ಮಾಡುವವರಿಗೆ ಕಳವಳ ಯಾವಾಗ ಇದೆ, ಯಾವಹೊತ್ತು ಇಲ್ಲ ಅಂತ ಗೊತ್ತುಮಾಡುವುವಾದರೂ ಹೇಗೆ?

* * * *

ಈ ವರ್ಷ ದೀಪಾವಳಿಗೆ ಮಾಡಿದ ಒಬ್ಬಟ್ಟಿಗೆ, ಸೆಕ್ಕಾರಿನ್ ಉಪಯೋಗಿಸಿದರಂತೆ ಮಾನ್ಯರೊಬ್ಬರು.

"ಭೇಷ್" ಅಂದನಂತೆ ಅಳಿಯ, ಬಾಲಮಧುಮಾತ್ರ ರೋಗಿಯಂತೆ ಅವ—

*　　*　　*　　*

ಭಾರತದ ಕಮ್ಯೂನಿಸ್ಟ್ ನಾಯಕರೊಬ್ಬರು "ಚೀಣಾ ಈ ರೀತಿ ದುರಾಕ್ರಮಣ ಮಾಡಿದರೆ ನಮ್ಮ ಸಖ್ಯ ಕಳೆದುಕೊಳ್ಳುತ್ತೆ" ಅಂದರಂತೆ

—ಇದರಿಂದ ನಮಗೆ ಹಣವೇ ಉಳಿಯುತ್ತೆ ಎಂದು ಪೀಕಿಂಗ್‌ನಲ್ಲಿ ಹೇಳಿದರಂತೆ.

*　　*　　*　　*

ಪ್ಸುರು ಪ್ಸುರು ಒತ್ತಿಯನ್ನು ಹಚ್ಚಿ ಹಬ್ಬ ಮಾಡಿದರಂತೆ, ಈ ವರ್ಷ;

—ಸ್ಯ—ಫ್ಯ—ಸ್ಸೈಕಾಲಜಿ ನಿಲಯದಲ್ಲಿ, ಸೈಕಿಯಾಟ್ರಿಸ್ಟರು!
ಅಂತದಾದಿಯರು ಲೊಚ ಗುಟ್ಟಿದರಂತೆ.

*　　*　　*　　*

ಜಯಗಳಿಸಿದ ಮಾಕ್ಮಿಲನ್ನರು ರಾಜಾಜಿಯ ಮನೆಗೆ ದೀಪಾವಳಿ ಪ್ರಯುಕ್ತ ಬರುತ್ತಾರೆಂದು ಹಬ್ಬಿದ ಸುದ್ದಿ ಸುಳ್ಳು ಅಂತ ಈಗ ಖಚಿತವಾಗಿದೆ.

*　　*　　*　　*

ಆಪರೇಷನ್ನಿಗೆಂದು ಹೋಗುತ್ತಿದ್ದ ರೋಗಿಯು, ಆಪರೇಷನ್ ಮಾಡುವ ಸರ್ಜನನಿಗೆ ಇನ್ನೂ ಬಾಡಿಗೆ ಮನೆ ಸಿಕ್ಕಲಿಲ್ಲವೆಂದು ತಿಳಿದಕೂಡಲೆ, ಆಪರೇಷನ್ ಬೇಡ ಎಂದು, ಆಸ್ಪತ್ರೆಯಿಂದ ತಲೆ ತಪ್ಪಿಸಿಕೊಂಡು ಓಡಿಹೋದನಂತೆ!!-

*　　*　　*　　*

ಈ ಸಾರಿ ದೀಪಾವಳಿ ಹಬ್ಬಕ್ಕೆ ಚೀನಾ ದೇಶದಿಂದ ಪಟಾಕಿಗಳನ್ನು ತರಿಸಲು ಸಾಧ್ಯವಿಲ್ಲವಂತೆ.

—ಪಟಾಕಿಗಳೆಲ್ಲವೂ ಹಿಮಾಲಯದಲ್ಲೇ ಹಾರಿಸಲ್ಪಡುತ್ತವೆಯಂತೆ!!

*　　*　　*　　*

ಒಂದು ಕೊಳದಪ್ಪಲೆ ತಂದುಕೊಡಿ ಅಂದ್ರೆ, ಸುಲಭವಾಗಿ ಸಾರುಮಾಡಬಹುದು ಹಳೇದಕ್ಕೆ ಬೆಸಸಿ ಬೆಸಸಿ ಸಾಕಾಗಿಹೋಯ್ತು ಎಂದು ಹೆಂಡತಿಯು, ಪ್ರೈಮರಿ ಶಾಲಾಮಾಸ್ತರನ್ನು ಕೇಳಿದಾಗ ಆತ ಮೂರನೇ ಪ್ಲಾನ್ ಅವಧಿಯಲ್ಲಿ ಇದನ್ನು ಕೈಗೊಳ್ಳಲಾಗುತ್ತೆ" ಎಂದನಂತೆ.

ಇದು ಕೇಳಿದ್ದಿರಾ!

ಬ್ರೆಜಿಲ್ಲಿನ ದೊಡ್ಡ ಷಹರುಗಳಲ್ಲೊಂದು ಸೌಪಾಲೊ. ಅಲ್ಲಿನ ಪ್ರಸಿದ್ಧ ಮೃಗಾಲಯದಲ್ಲಿನ ಘೇಂಡಾ ರಾಣಿಯ ಹೆಸರು "ಕೆಕಾರಿಕೊ" ಗಡಸು ಚಮ ಡಕ್ಕೂ ಮಂದ ದೃಷ್ಟಿಗೂ, ಅಲ್ಪ ಬುದ್ಧಿಗೂ, ಹೆಚ್ಚು ರೇಗುವಿಗೂ ಘೇಂಡಾಮೃಗವು ಹೆಸರುವಾಸಿ. ರಾಣಿಯು ಹೆಚ್ಚಾಗಿ ನಿಶಾಚರೆ.

ಸೌಪಾಲ್ಲೋದಲ್ಲಿ ಆಹಾರದ ಬೆಲೆ ಏರುತ್ತಿತ್ತು. ರಾಜಕೀಯ ನಾಯಕರು ಸ್ವಾರ್ಥಿಗಳೆಂಬ ಅನುಮಾನ ಹೂಡಿತ್ತು. ಮುಖ್ಯ ಸೌಪಾರೋ ಜನರಿಗೆ ಬೇಜಾರು ಬಂದಿತ್ತು.

ಪೌರಸಭೆಯ ಚುನಾವಣಾ ಕಾಲ ಬಂದಿತು.

ಯಾವುದೋ ರೀತಿಯ ಕೃತ್ರಿಮ ಹೂಡಿ ಜನತೆ "ಕೆಕಾರಿಕೊ"ಳನ್ನು ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲಿಸಿದರು. ಎಲ್ಲ ಅಭ್ಯರ್ಥಿಗಳಿಗಿಂತಲೂ ಕೆಕಾರಿಕೊ ಒಂದು ಲಕ್ಷ ಹೆಚ್ಚು ಮತಗಳಿಸಿ ಜಯಭೇರಿ ಬಾರಿಸಿದಳು.

ಆದರೆ ಚುನಾವಣಾ ಅಧಿಕಾರಿಗಳು ಕೆಕಾರಿಕೊ ಚುನಾವಣೆ ನ್ಯಾಯ ಸಮ್ಮತ ವಲ್ಲ ಎಂದು ಘೋಷಿಸಿದರು.

ಸಮಾಜಶಾಸ್ತ್ರದ ಹಿರಿಯ ಪಂಡಿತರಾದ ಗ್ವಿರಿರೋ ರಾಮೋಸ್‌ರವರು "ಈ ಘಟನೆಯು ಸಮಾಜ ಶಾಸ್ತ್ರದ ಮೇಲೆ ಅತ್ಯಧಿಕ ಪ್ರಭಾವ ಬೀರುತ್ತದೆ" ಎಂದು ಹೇಳಿಕೆಯಿತ್ತರು.

ಕೈಕಾರಿಕೊ "No Comments" ಎಂದು ಗುಟರಿಸಿದಳು.

* * * *

ಹೆಬ್ಬಿ ಗುಬ್ಬಾಲೆಯ ಸಾಹುಕಾರರು, ಕಾಸು ಬಿಚ್ಚದೇ ಇದ್ದರೂ, ಮಾತಿನಲ್ಲಿ ಬಲು ಉದಾರಿಗಳು. ಅವರ ನಾಲಿಗೆ ಜೊಲ್ಲು ಸುರಿಸುತ್ತಿರಲಿಲ್ಲ; ಹಾಲ್ಜೇನನ್ನೇ ಸುರಿಸುತ್ತಿತ್ತು.

ದನಗಳನ್ನು ನೋಡಿಕೊಳ್ಳುವ ಹೈದನನ್ನು ಪ್ರಾತಃಕಾಲ ಕಂಡಾಗ, ಸಾಹು ಕಾರನ ಕಣ್ಣಲ್ಲಿ ನೀರೇ ಬಂದುಬಿಡ್ತು. ಅಂತರಂಗವೆಲ್ಲಾ ನೀರಾದಂತೆಯೇ ಕಂಡಿತು. ಗದ್ಗದ ದನಿಯಲ್ಲಿ ಹೈದನನ್ನು ಕೇಳಿದರು. "ಯಾಕ ಮಗ! ಬಲಗಣ್ಣು ಹೊಟ್ಟಿ

ಬಾತಿದೆ? ದೇವರ ಪೂಜೆಗೆಂದು ಹೂವು ಕೀಳುಕ್ಕೆ ಸಂಪಿಗೆ ಮರ ಹತ್ತುವಾಗ, ರೆಂಬೆ ಕಣ್ಣು ಹೊಟ್ಟೆಗೆ ತಾಕಿತಾ? ಭಾವಿಯಿಂದ ನೀರು ಸೇದೋವಾಗ, ಬಿಂದಿಗೆ ಝೋಕು ಹೊಡೆದು ಕಪಾಳಕ್ಕೆ ಹೊಡೆಯಿತಾ? ಅಪ್ಪನಿಗೆ ಎದುರು ಮಾತಾಡಿ ಅವನೇನಾದರೂ ಎರಡು ಏಟು ಬಿಗಿದನಾ? ಅಥವಾ ಕೆರೆಯಂಚಿನಲ್ಲಿ ದನಗಳನ್ನು ಮೇಯಿಸುವುದಕ್ಕೆ ಹೋದಾಗ ಏನಾದರೂ ಚೆಲ್ಲಾಟ ಆಡಿ ಯಾರ ಕೈಲಾದರೂ ತಪರಾಕು ತಿಂದೆಯಾ ಎಂದೆಲ್ಲಾ ವಿಚಾರಿಸಿದರು, ಬಲು ಕನಿಕರದ ದನಿಯಿಂದ.

ಹೈದನಿಗೆ ಎಷ್ಟೋ ಸಂಕಟವಾಯಿತು. ನನಗೆ ಪೆಟ್ಟುಬಿದ್ದು. ಬಾತುಕೊಂಡರೆ, ನನಗಿಂತ ಸಾಹುಕಾರರು ನೋವುತಿನ್ನುತ್ತಾರಲ್ಲ ಅಂತ.

''ಹಾಗೇನೂ ಆಗಲಿಲ್ಲ ಸೋಮಿ. ಮರ ಹತ್ತೋದರಲ್ಲಿ ನನಗಿಂತಯಾರಾರೂ ಚೂಟಿ ಇದ್ದಾರಾ? ಭಾವಿನೀರು ಹುಷಾರಾಗೇ ಸೇದುತ್ತೀನಿ. ಅಪ್ಪನಿಗೆ ಎಂದೂ ಎದುರುಮಾತಾಡುಲ್ಲ. ಕೆರೆಯಂಚಿನಲ್ಲಿ ಯಾರೂ ಇರೋದಿಲ್ಲ. ಇದ್ದಾಗ ನಾನು ಚೆಲ್ಲಾಟ ಆಡೋದೂ ಇಲ್ಲ.

ಆದರೆ ಬೆಳಿಗಿನ ಝಾಮು ಹಾಲು ಕರೆಯುವಾಗ ಆ ಕರೀ ಹಸ ಇದೆ ನೋಡಿ ಅದು ಹಾಲು ಕರಿಯುಕ್ಕೆ ನಾನು ಕೂತಾಗಲೆಲ್ಲಾ, ನನ್ನ ಕಪಾಳಕ್ಕೆ ಅದರ ಬಾಲದ ಕುಚ್ಚನ್ನು ತಾಗಿಸುತ್ತಾ ಇತ್ತು. ತಡಿ ಇದಕ್ಕೆ ಬುದ್ಧಿ ಕಲಿಸ್ತೀನಿ ಅಂತ ಅದರ ಬಾಲದ ಬಿಡಿತುದಿಗೆ ಒಂದು ಇಟ್ಟಿಗೆ ಕಟ್ಟಿದೆ.

ಅದಕ್ಕೇ ಕಣ್ಣು ಹೊಟ್ಟೆ ಊದುಕೊಂಡಿದೆ. ಅಂದ ಹೈದ.

''ಅಷ್ಟೇನಾ! ಹಾಗಾದರೆ ಕೆಲಸಮಾಡುಕ್ಕೆ ಏನೂ ಹರ್ಕತ್ ಇಲ್ಲವಲ್ಲ. ಏನೋ ಆಗಿದೆ ಪಾಪ ಅಂತ ಅಂದುಕೊಂಡಿದ್ದೆ" ಎಂದು ಹಿಗ್ಗಿನಿಂದ ಸಾಹುಕಾರರು ಲೊಚಗುಟ್ಟಿದರು.

ಸೂರತ್ತಿನಲ್ಲಿ ಪ್ರವಾಹ ಮಿತಿಮೀರಿದಾಗ, ಮರದ ಕೊಂಬೆಗಳಮೇಲೆ ತಾಯಿಯೊಬ್ಬಳು ಮಗುವನ್ನು ಹೆತ್ತಳಂತೆ.

—ವಾನರ ಗೋತ್ರೋದ್ಭವನಿಗಳು, ಮಾನವರು, ಎಂಬುದಕ್ಕೆ ಇದಕ್ಕಿಂತ ಸಾಕ್ಷ್ಯ ಬೇರೇ ಬೇಕೇ?

*   *   *   *

ಪೋಲಿಸ್ ಪಡೆ ಪಾನನಿರೋಧಕ್ಕೆ (ಸುದ್ದಿ)

—ಕುಡಿಯಕ್ಕೆ ಅವರು ಶುರು ಹಚ್ಚಿದ್ದರು ಅಂತಲೇ ಗೊತ್ತಿತ್ತಿಲ್ಲ ನಮಗೆ—

*   *   *   *

ಅವಲಕ್ಕಿ ತಿಂದು, ಅನ್ನ ಬಿಟ್ಟುಬಿಟ್ಟರೆ, ಕುಚೇಲನಹಾಗೆ ತೆಳ್ಳಗಾಗಬಹುದೇ ಸಾರ್ ಅಂತ ಧಡಿಯನೊಬ್ಬ ವೈದ್ಯನನ್ನು ಕೇಳಿದನಂತೆ.

ದೀಪಾವಳಿ ಸಂದೇಶ—

ಬೇಲಿ ಕೆಡವಬೇಡಿ !

"ಸಂಬಂಧಿಕರನ್ನೇನೋ ದೇವರೇ ಕೊಟ್ಟಿರುತ್ತಾನೆ; ಸ್ನೇಹಿತರನ್ನಾದರೂ ನಮಗೆ ಬೇಕಾದ ಹಾಗೆ ಆರಿಸಿಕೊಳ್ಳಬಹುದಲ್ಲಾ" ಎಂದು ನಿಟ್ಟುಸಿರುಗರೆದನಂತೆ ಒಬ್ಬ ಸಿನಿಕ. ಆತ ಹೇಳಿದಹಾಗೆ ಸ್ನೇಹಿತರನ್ನೇನೋ ನಮಗೆ ಬೇಕಾದವರನ್ನೇ ಆರಿಸಿಬಹುದೆಂದಿಟ್ಟುಕೊಳ್ಳೋಣ. ಆದರೆ ಆ ಮಾತು ನಮ್ಮ ನೆರೆಹೊರೆಯವರ ಕುರಿತು ಅನ್ವಯಿಸುತ್ತದೋ ಎಂದು ನೋಡಬೇಕು ನಮಗೆ ಬೇಕಾದ ನೆರೆಹೊರೆಯೇ ನಮಗೆ ಸಿಗುವುದು ಸಾಧ್ಯವುಂಟೆ? ಸಂಬಂಧಿಕರನ್ನು ದೇವರೇ ಕೊಟ್ಟಿರುತ್ತಾನೆ ಎಂದಹಾಗೆ ನೆರೆಹೊರೆಯೂ ನಮ್ಮ ನಮ್ಮ ಪ್ರಾಪ್ತಿಯಿದ್ದಹಾಗೆ ಎಂದು ಹೇಳ ಬಹುದು. ಆ ಮಟ್ಟಿಗೆ ನಾವು ಪರಿಸ್ಥಿತಿಯ ದಾಸರು. ದೇವರು ಕೊಟ್ಟ ಬಂಧು ಬಳಗದೊಡನೆ ಹೊಂದಿಕೊಂಡು ಬಾಳಲು ಹೇಗೆ ಒದ್ದಾಡುತ್ತೇವೋ ಹಾಗೆಯೇ ದೇವರು ಕೊಟ್ಟ ನೆರೆ ಹೊರೆಯವರೊಡನೆಯೂ ಸುಧಾರಿಸಿಕೊಂಡಿರಲೇಬೇಕು.

ಹಾಗೆ ಬಾಳೋದಕ್ಕೆ ಹಿಂದಿನವರು "ನೆರೆಹೊರೆಯುವರನ್ನು ಪ್ರೀತಿಸಿ" ಎಂಬ ಸೂತ್ರವನ್ನು ಮುಂದಿಟ್ಟರು. ಪ್ರೀತಿಯೊಂದಿದ್ದರೆ ಎಲ್ಲವೂ ಸರಿಹೋಗುತ್ತದೆಂದು ಆಗಿನವರ ಅಭಿಪ್ರಾಯ. ಆದರೆ ಕಾಲ ಬದಲಾಯಿಸಿತು. ಜನಗಳೂ ಬದಲಾದರು. ಶಬ್ದಗಳಿಗೆಲ್ಲ ಹೊಸ ಅರ್ಥಗಳು ಮೂಡತೊಡಗಿದ್ದಾವೆ. ಅಥವಾ ತಮ್ಮದೇ ಅರ್ಥವನ್ನು ಜನ ಕಟ್ಟಿಕೊಳ್ಳುತ್ತಿದ್ದಾರೆ. "ನೆರೆಹೊರೆಯುವರನ್ನು ಪ್ರೀತಿಸಿ" ಎಂಬ ಸೂತ್ರವನ್ನು ಕುರುಡು ಕುರುಡಾಗಿ ಹಿಡಿದುಕೊಂಡು, ಎಲ್ಲ ಬಿಟ್ಟು ನೆರೆಯವರ ಹೆಂಡಂದಿರನ್ನು ಪ್ರೀತಿಸಿಹೋಗುತ್ತಾರೆ ಜನ. ಆಗ ಪುಂಡಾಟ ಪಿಸ್ತೂಲು ಕೋರ್ಟು ಕೋಲಾಹಲ ಇವುಗಳೇ ಗತಿ. ಪ್ರೀತಿಯ ಅವಸ್ಥೆ ಹೇಳ ತೀರದು.

ಇನ್ನು ಕೆಲವರು ನೆರೆಹೊರೆಯುವರನ್ನು ಪ್ರೀತಿಸುವ ಕ್ರಮ ಬೇರೆಯೇ ಇದೆ. ನೇರಬಂದು ಪ್ರೀತಿಯಿಂದ ನಮ್ಮ ಮನೆಯ ವರಾರದಲ್ಲಿಯೇ ತಳವೂರಿ ತಮ್ಮ ಪ್ರೀತಿ ಪ್ರದರ್ಶಿಸುತ್ತಾರೆ. ಆಗಲೂ ಪರಿಣಾಮ ಕೆಟ್ಟುದೇ. ಆದ್ದರಿಂದ "ನೆರೆಹೊರೆ ಯವರನ್ನು ಪ್ರೀತಿಸಿ" ಎಂಬ ತತ್ವ ತೀರ ಉಪಯೋಗವಿಲ್ಲದ್ದಾಗಿದೆ. ಪ್ರತಿಯೊಂದು ತತ್ವವೂ ಕಾಲಕಾಲಕ್ಕೆ ಕೋಡುಮೂಡುತ್ತದೆ. ಹಾಗೆಯೇ ಈ ತತ್ವಕೂ ಬಹಳ ಮೊದಲೇ ಒಬ್ಬ ಬುದ್ಧಿವಂತ ಒಂದು ಕೋಡು ತಯಾರಿಸಿಟ್ಟಿದ್ದಾನೆ. ಆತ ಹೇಳಿದ "ನೆರೆಯವರನ್ನು ಪ್ರೀತಿಸಿ; ಆದರೆ **ನಿನ್ನ ಬೇಲಿ ಕೆಡವಿಕೊಳ್ಳಬೇಡ**" ಎಂದು

"ಬೇಲಿ ಕೆಡವಿಕೊಳ್ಳಬೇಡ" ಎಂಬ ಈ ಮಾತು—ಈ ತತ್ವದ ಕೋಡು—ಇಂದು ನಮಗೆ ತತ್ವಕ್ಕಿಂತಲೂ ಮುಖ್ಯವಾಗುವ ಕಾಲ ಬಂದಿದೆ.

ಬೇಲಿ ಕೆಡವಿಕೊಂಡಿದ್ದರಿಂದಲೋ ಬೇಲಿಯೇ ಇಲ್ಲದ್ದರಿಂದಲೋ ಈ ವರ್ಷ ನಮ್ಮ ದೇಶ ಬಹಳ ಪೇಚಿಗೆ ಸಿಕ್ಕಿಕೊಂಡಿದೆ. ನೆರೆಹೊರೆಯವರಿಗೆ ನಾವು ಎಷ್ಟೇ 'ಭಾಯಿ ಭಾಯಿ' ಆಗಿರಲಿ ಬೇಲಿಯೊಂದು ನಮಗೂ ಅವರಿಗೂ ನಡುವೆ ಭದ್ರ ವಾಗಿಲ್ಲದಿದ್ದಲ್ಲಿ ಕೇಡು ತಪ್ಪಿದ್ದಲ್ಲ ಎಂದು ರಾಷ್ಟ್ರ ರಾಷ್ಟ್ರಕ್ಕೇ ತಿಳಿದುಹೋಗಿದೆ. ಬೇಲಿ ಬೇಕು ಎಂದು ನಾಡಿನ ಉದ್ದಗಲದಲ್ಲಿ ಜಾಗೃತಿಯುಂಟಾಗಿದೆ. ಪೂರ್ವ ಉತ್ತರವಾಯುವ್ಯ ಎಲ್ಲ ಕಡೆಗಳಲ್ಲಿಯೂ ಬೇಲಿಯಾಗಬೇಕೆಂದು ಹಾತೆರೆ ಯುತ್ತಿದ್ದೇವೆ. ದಕ್ಷಿಣೆಕ್ಕೇನೋ ಸಮುದ್ರವೇ ಹಾಸಿರುವುದರಿಂದ ಬೇಲಿಯ ಅಗತ್ಯ ವಿಲ್ಲ.

ಹೀಗೆ ಬೇಲಿ ನಿಲ್ಲಿಸಲು ಹಾತೊರೆಯುವುದು ಸುಲಕ್ಷಣವಲ್ಲವೆಂದು ಕೆಲವರಿಗೆ ಕಾಣಬಹುದು. ಆದರೆ ಬೇಲಿಯಿಲ್ಲದೆ ನೆರೆಹೊರೆಯವರಲ್ಲಿ ಪ್ರೀತಿ ಉಳಿಯುವ ಹಾಗಿಲ್ಲವೆಂದು ಈಗ ಸಿದ್ಧಾಂತವಾಗಿಬಿಟ್ಟಿದೆ.

ಇಂಡಿಯಾ ದೇಶದ ಪ್ರಸ್ತಾಪಬಿಟ್ಟು ನಮ್ಮ ಕರ್ಣಾಟಕವನ್ನೇ ತೆಗೆದು ಕೊಂಡರೂ ಬೇಲಿಯು ಗುರುತಾದರೂ ಇಲ್ಲದಿದ್ದರೆ ಉಳಿಗಾಲವಿಲ್ಲವೆಂಬ ಹಾಗಾಗಿದೆ. ನೇಟರನ್ನು ದೇವರೇ ಕೊಟ್ಟ ಎಂದ ಹಾಗೆ ನೆರೆ ರಾಜ್ಯಗಳೂ ನಮಗೆ ದೇವರಿಂದಲೇ ಬಂದಿತೆನ್ನಿ. ಕೆಲವು ರಾಜ್ಯಗಳಿಗೆ ಗಡಿತಂಟೆ ಅಷ್ಟೊಂದಿಲ್ಲ. ಆದರೆ ನಮಗೆ ಸುತ್ತ ಮುತ್ತ ಇರುವ ಬೇಲಿ ಇನ್ನೂ ಭದ್ರವಾಗಿಲ್ಲವೋ ಅನ್ನಿಸುತ್ತದೆ. ಬೇಲಿಯೇ ಸರಿಯಿಲ್ಲ ಎಂಬ ವಾದವೂ ಇದೆ. ಬೇಲಿ ಸ್ಥಿರವಾದಷ್ಟು ನೆರೆಹೊರೆಯವರೊಡನೆ ನೆಮ್ಮದಿ ಹೆಚ್ಚು !

ರಾಷ್ಟ್ರದ ಮಾತಾಯಿತು. ರಾಜ್ಯದ ಮಾತಾಯಿತು. ಮನೆಮನೆಗೂ ಈ ಬೇಲಿಯ ಮಹತ್ವ ತಿಳಿದಿರಲೇಬೇಕಾಗಿದೆ. ನೆರೆ ಹೊರೆಯವರೊಡನೆ ಪ್ರೀತಿ ಎಷ್ಟಿದ್ದರೂ ಈ ಬೇಲಿ ಕೊಡವಿಕೊಳ್ಳುವ ಅವಿವೇಕವೊಂದು ಬರಬಾರದು. ಪ್ರೀತಿ ಕೊನೆತನಕ ಉಳಿಯಬೇಕಾದರೆ ನಡುವೆ ಒಂದು ಬೇಲಿ ಬೇಕೇ ಬೇಕು ಆ ಬೇಲಿ ಕಲ್ಲು ಮುಳ್ಳಿನದೂ ಇರಬಹುದು, ಅಥವಾ ಯಾರಿಗೂ ಕಾಣದ ಕಲ್ಪನೆಯಲ್ಲಿ ಮಾತ್ರ ಇರುವ "ಮಿತ" ಎಂಬ ಬೇಲಿಯೂ ಆಗಬಹುದು. ಅಂತೂ ಬೇಲಿ ಬೇಕು ಇದು ಸಂಕುಚಿತತೆ ಎಂದು ಗೇಲಿ ಮಾಡುವರು ಮಾಡಲಿ. ಬೇಲಿ ಕೆಡವಿಕೊಂಡು ಮುಖ ಮುರಿದುಕೊಳ್ಳುವುದಕ್ಕಿಂತ ಬೇಲಿ ಉಳಿಸಿಕೊಂಡು ಪ್ರೀತಿ ಬೆಳೆಸುವುದೇ ಚೆನ್ನು, ಆದ್ದರಿಂದ ಈ ದೀಪಾವಳಿಗೆ ಯಾರಾದರೂ ಹಿರಿಯರು "**ಬೇಲಿ ಕೆಡವಬೇಡಿ**" ಎಂಬ ಸಂದೇಶವನ್ನು ರಾಷ್ಟ್ರಕ್ಕೆ ಕೊಟ್ಟಿದ್ದರೆ ಚೆನ್ನಾಗಿತ್ತು.

(ಸಂಪಾದಕರೆ, ಈ ಲೇಖನದಲ್ಲಿ ಹಾಸ್ಯವೆಂಬುದೇ ಇಲ್ಲ ಅಲ್ಲವೆ? ಆದರೆ ಹಾಸ್ಯಕ್ಕೂ ಒಂದು ಬೇಲಿ ಬೇಕಾಗುವ ಕಾಲ ಬರುವುದುಂಟು. ಕ್ಷಮಿಸಿ)

—ರಾಮಿ

ಆಸ್ಪತ್ರೆ ಸರ್ಟಿಫಿಕೇಟ್

ರಾಜೀವಪುರದ ದೊಡ್ಡಾಸ್ಪತ್ರೆ ಅಧಿಕಾರಿಗಳಿಗೆ, ಬಯಲು ಬೋರನಹಳ್ಳಿ ಕಂಟ್ರಾಕ್ಟರು ಧ. ಪು. ಸಂಗಣ್ಣನವರಿಂದ ಒಂದು ಪತ್ರ ಬಂದಿತು.

"ಸ್ವಾಮಿ ನಿಮ್ಮಾಸ್ಪತ್ರೆಯಲ್ಲಿ ಶನಿವಾರದ ತನಕ ಮೂರುತಿಂಗಳಿದ್ದು ಹೊರಬಿದ್ದ ರುಕ್ಮಾಂಗದಪ್ಪನು ನಮ್ಮಲ್ಲಿ ಕೆಲಸಕ್ಕೆ ಅರ್ಜಿ ಹಾಕಿದ್ದಾನೆ. ಅವನ ಆರೋಗ್ಯದ ವಿಷಯ ತಾವೆರಡು ಪಂಗ್ತಿ' ಬರೆದು ಕಳಿಸಿದರೆ, ಆತನನ್ನು ಕೆಲಸಕ್ಕೆ ಸೇರಿಸಿಕೊಳ್ಳೀದೇ ಬೇಡವೆ ಎಂದು ನಾವು ತೀರ್ಮಾನಿಸಬಹುದು. ಸ್ಟಾಂಪು ಹಚ್ಚಿದ ವಿಳಾಸ ಬರೆದ ಲಕ್ಕೋಟೆಯನ್ನು ಕಳಿಸಿದ್ದೇವೆ. ದಯವಿಟ್ಟು ಉತ್ತರಿಸಿ ಕೃಪೆ ಮಾಡಬೇಕು"

ಆಸ್ಪತ್ರೆಯ ಹಿರಿಯಧಿಕಾರಿಗಳು ಮಧ್ಯಮವರ್ತಿ ಅಧಿಕಾರಿಗಳಿಗೆ, ಅವರು ಕೆಳದರ್ಜೆ ಅಧಿಕಾರಿಗಳಿಗೆ ಅವರು ಅಧಿಕಾರವಿಲ್ಲದ ಕಾರಖೂನನಿಗೆ ಶಾಸ್ತ್ರೋಕ್ತವಾಗಿ ಈ ಕಾಗದವನ್ನು ಕಳಿಸಿದರು. ಅಲ್ಲಿಂದ ಅದು ಆಸ್ಪತ್ರೆಯ ವಾರ್ಡಿಗೆ ಹೋಗಿ ವಾರ್ಡ್‌ಬಾಯ್, ನರ್ಸು, ಆಯಾ, ಇವರುಗಳ ಹೇಳಿಕೆಯನ್ನು ಬರೆಸಿಕೊಂಡು, ಮಟ್ಟಮಟ್ಟದಲ್ಲೂ ಟೀಕಾಗಳಿಂದಕೂಡಿ ಹಿರಿಯಧಿಕಾರಿಗಳಿಗೆ ಬಂದು ಅವರು ಉತ್ತರವಿತ್ತರು ಈ ರೀತಿ.

"ಸಂಗಣ್ಣನವರಿಗೆ ಶರಣಾರ್ಥಿ ನಿಮ್ಮ ಕಾಗದ ತಲಪಿತು. ನಮ್ಮ ಆಸ್ಪತ್ರೆಗೆ ಸೇರಿ ಮರಳಿ ಹೋದವರ ಸಂಖ್ಯೆ ಹೆಚ್ಚಾದುದರಿಂದ ಹೆಸರು ಜ್ಞಾಪಕ ಇಟ್ಟುಕೊಳ್ಳುವುದು ಅಸಾಧ್ಯ. ತಲಾಷುಮಾಡಿದ ಮೇಲೆ ರುಕ್ಮಾಂಗದಪ್ಪನ ಸಂಖ್ಯೆ ೭೧೧. ಅಂತ ತಿಳಿಯಿತು ಇನ್ನು ಮೇಲೆ ಪತ್ರ ಬರೆಯುವಾಗ ೭೧೧ ಸಂಖ್ಯೆಯನ್ನು ನೀವು ತಿಳಿಸಿದರೆ, ಉತ್ತರಕೊಡಲು ಸುಲಭ.

ಪ್ರಕೃತ ೭೧೧ ನಮ್ಮ ಆಸ್ಪತ್ರೆಯಲ್ಲಿ ಮೂರು ತಿಂಗಳುಕಾಲ ಇದ್ದುದಕ್ಕೆ ದಾಖಲೆ ಇದೆ. ಈ ಕಾಲದಲ್ಲಿ ೨೨೦ ಪೌಂಡು ಬ್ರೆಡ್ಡು ೧೯೦ ಸೇರು ಹಾಲು ೧೯ ಪೌಂಡು ಸಕ್ಕರೆ, ೧೮೦ ಬಟ್ಟಲು ಕಾಫಿ, ೧೮೦ ಪೂರ್ಣ ಊಟಗಳು ಅವನ ಲೆಕ್ಕದಲ್ಲಿ ಸರಬರಾಜಾದಂತೆ ದಾಖಲಾಗಿದೆ.

೧೯ ಮುಗ್ಗಲು ಹಾಸಿಗೆ ೨ ದಿಂಬಿನ ಚೀಲಗಳು ೨ ಕಂಬಳಿಗಳು ಆ ಲೆಕ್ಕದಲ್ಲಿ ಮಾಯವಾಗಿದೆ.

೬ ಥರ್ಮಾಮಿಟರುಗಳು, ೧೬ ಬೆಡ್‌ಪ್ಯಾನುಗಳು ಈ ನಂಬರಿನ ಲೆಕ್ಕದಲ್ಲಿ ಕಳ ವಾಗಿವೆ.

೧೭ ಸಾರಿ ನರ್ಸುಗಳಮೇಲೆ ಅವ ದೂರು ಒರೆದು ಕಳಿಸಿದ್ದ. ೭೯ ಬಾರಿ ವಾರ್ಡ್‌ಬಾಯ್ಗಳಮೇಲೆ ಕೈಮಾಡಿದ್ದ. ೯೯ ಸಾರಿ ಆಯಾಗಳ ಹತ್ತಿರ ಜಗಳ ಮಾಡಿದ್ದಕ್ಕೆ ದಾಖಲೆ ಸಿಕ್ಕಿದೆ.

ಅವನ ಕಾಲದಲ್ಲಿ ಇಬ್ಬರು ವಾರ್ಡ್ ಡಾಕ್ಟರುಗಳಿಗೆ ದೂರದೇಶಗಳಿಗೆ ವರ್ಗವಾಯ್ತು.

ಅವನ ಆರೋಗ್ಯ ಭೋಗಕ್ಷೇಮ ವಿಚಾರಿಸಲು ಒಮ್ಮೆ ಉಪ ಸಚಿವರ ಡ್ರೈವರು ಆಗಮಿಸಿದ್ದರು, ಕಾರಲ್ಲಿ.

ಆಸ್ಪತ್ರೆಯನ್ನು ಬೀಳ್ಕೊಟ್ಟು ೭೧೧ ಹೋದ ಶನಿವಾರವೇ ವಾರ್ಡಿನ ನರ್ಸು ಕೆಲಸಕ್ಕೆ ರಾಜಿನಾಮೆ ಕೊಟ್ಟಳು.

ಇಷ್ಟು ಅಂಕಿ ಅಂಶಗಳು ೭೧೧ ಫೈಲಿನಲ್ಲಿ ಸಿಕ್ಕಿದೆ. ಕೆಲಸ ಕೊಡುವ, ಬಿಡುವ ತೀರ್ಮಾನಕ್ಕೆ ಇವು ಸಹಾಯಕವಾಗಬಹುದೆಂದು ನಂಬಿದ್ದೇನೆ.

ಅವನ ಆರೋಗ್ಯದ ವಿಚಾರ ತಾವು ಬರೆದು ತಿಳಿಸಿದರೆ ನಮಗೆ ಸಹಾಯ ವಾಗುತ್ತೆ. ನಮ್ಮ ಫೈಲನ್ನು ಪೂರ್ಣಗೊಳಿಸಬಹುದು ಸೂಕ್ಷ್ಮ ಆರೋಗ್ಯ ವಿಚಾರ ಬೇಕಿಲ್ಲ. ಪ್ರಮುಖವಾಗಿ, ಅವನ ಊಟ ಓಟ, ನೋಟ ಇವುಗಳಷ್ಟನ್ನು ಸ್ಥೂಲವಾಗಿ ತಿಳಿಸಿದರೆ ಸಾಕು.

ಮರೆಯಬೇಡಿ ೭೧೧ ಅಂತ ನಂಬರು ಗುರ್ತಿಸುವುದನ್ನು

ನಿಮ್ಮ ಸೇವಾಭಿಲಾಷಿ
ರಾ. ದಿ. ಹಿರಿ ಅಧಿಕಾರಿ
M. D. (ಹಿಂದಿ)
—**ಪ್ರಕಾಶ್**

ಹಾಲಿಲೂಜ! ಅಂತ ಆಗ ಕೂಗುತ್ತಿದ್ದರು! ಮೂಲಭೂತ ಸತ್ಯದ ಕುರುಹು ಕಂಡಾಗ! ಪುರುಷೋತ್ತಮರು.

ಈಗ 'ಅಹುಜಾ' ಅಂತ ಮಾತ್ರ ಕೂಗುತ್ತಾರಂತೇ!

ನವೀನ

(ಚೀಣದಿಂದ)

ನಾಡಿನ ಉತ್ತರ ಪೂರ್ವ ದಿಗಂತದಿ
    ಪೀತವರ್ಣ ಪ್ರಭೆ ಹೊಮ್ಮುತಿದೆ!
ಸಹಜೀವನ ನೀಡುವ ಉತ್ಸಾಹದಿ
    ಸುತ್ತಿಗೆ ಕುಡುಗೋಲ್ ಚಿಮ್ಮುತಿವೆ!
ಪಂಚಶೀಲ ಕಿರುಲಿದ ಕಲಕಂಠದಿ
    ನವ ನೀತಿಯ ನುಡಿ ಪೊಣ್ಮುತಿವೆ!
ಹಿಮವತ್ಪರ್ವತ ಹಾಸುದ್ದಗಲದಿ
    ಛಿದ್ರ ಸಾಸಿರಗಳುಣ್ಮುತಿವೆ!
    ನಿಜ ಸುಳ್ಳಾಗುತಿದೆ!
    ಸುಳ್ ನಿಜವಾಗುತಿದೆ!

ಹೆಬ್ಬಾಗಿಲಿನಲಿ ಮನೆಯಂಗಳದಲಿ
    ಸುತ್ತಿಗೆ ಕುಡುಗೋಲಿನ ಜಿದ್ದು
ನೆನಪಿಗೆ ಬರುತಿದೆ ಸಹಜೀವನ ಹೊಂದಿದ
    ಹಂಗೆರಿ ಟಿಬೆಟಿನ ಕೊನೆ ಸದ್ದು!
ರುಧಿರ ಸಿಂಚಿತ ಭೂಖಂಡ ವಿಶಾಲದಿ
    ಮಾವೋ ಹೊಸ ಬಲೆ ನೆಯ್ಯುತಿರೆ
ಕಾಮ್ರೇಡ್ ಕಂಠಗಳು ಇತ್ತ ತಾರಕದಿ
    ಪ್ರೇಮಾಲಾಪನೆ ಗೈಯುತಿವೆ!
    ಸಹಜೀವನ ಹೃದಯಗಳೇಳಿ,
    ನವೀನ ಗಾನವೆ ಕೇಳಿ!

ನಾಡಿನ ಪುಣ್ಯದಿ ಪೂರ್ವ ದಿಗಂತದಿ
    ಪಂಚಶೀಲದರಿವಾಗುತಿದೆ!
ನೂರು ಶಬ್ದಗಳಿಗರ್ಥಕೋಶದಲಿ
    ನವ ನವ ಅರ್ಥಗಳೇಳುತಿವೆ.

(ಕುವೆಂಪು ಕ್ಷಮೆ ಬೇಡಿ)

—ರಾಮಿ

" ವಿನೋದಾವಳಿ "

"ಡಂಣ್, ಢಂಣ್, ಢಂಣ್ ಢಂಣ್ ಢಂಣ್, ಢಂಣ್"

ಶಾಮಣ್ಣ ಕೈ ಗಡಿಯಾರ ನೋಡಿಕೊಂಡ, ಹಾಲಿನಲ್ಲಿ ತುಂಬಿದ್ದ ಪ್ರೇಕ್ಷಕರನ್ನು ದಿಟ್ಟಿಸಿದ, ಸ್ಟೇಜಿನ ಮೇಲೆ ಕಣ್ಣು ಹೊರಳಿಸಿದ. ಬಿಳೀ ಹಚ್ಚಡ ಹೊದಿಸಿದ್ದ ಟೇಬಲ್, ಅದರ ಹಿಂದುಗಡೆ ಇದ್ದ ಖಾಲಿ ಕುರ್ಚಿಗಳನ್ನು ನೋಡಿದ. ಕೂಡಲು ಸೀಟಿಲ್ಲದೆ ಕೈ ಕಟ್ಟಿ ಗೋಡೆಗೊರಗಿ ನಿಂತಿದ್ದ ಮಹನೀಯರೊಬ್ಬರು "ಆರು ಘಂಟೆ ಹೊಡಿತು ಆಗ್ಲೆ" ಎಂದೆಚ್ಚರಿಸಿದರು. ಮುಂದೆ ಕುಳಿತಿದ್ದ ಮಹಾಜನರು ಕಾರ್ಯಕ್ರಮ ಇನ್ನೂ ಶುರು ಆಗದಿದ್ದುದಕ್ಕೆ ಗೊಣಗಿಕೊಂಡರು.

ಹೊರಗೋಡಿಬಂದು ಬೀದಿಯುದ್ದಕ್ಕೂ ಕಣ್ಣು ಹಾಯಿಸಿದ ಶಾಮಣ್ಣ. ಉಹುಂ. ಸಭಾಧ್ಯಕ್ಷರೇ ನಾಪತ್ತೆ. ಜಾಹಿರಾತುಗಳಲ್ಲಿರುವಂತೆ ಪೆಪ್ಪರಮೆಂಟ್ ತಿನ್ನಲು ಹೋದರೋ ಎಂದು ಕಾಕ್‌ನಂಗಡಿಗೋಡಿದ. "ಇಲ್ಲಿ ಸಾರ್" ಎಂದವನ ಕೈಲನ್ನಿಸಿಕೊಂಡು, ಎರಡು ಛಾಕೊಲೆಟ್ ಚೂರುಗಳನ್ನು ಜೋಬಿಗೆ ತುರುಕಿ ಮತ್ತೋಡಿ ಬಂದ. ಸಭಾ ಮಂಟಪಕ್ಕೆ. ಉಪಕಾರ್ಯದರ್ಶಿಯೊಂದಿಗೆ ಒಂದೈವರು ಸಿಸ್ತುಗಾರ ಪುಟ್ಟಸಾಮಿಗಳು ಸ್ಟೇಜಿನಮೇಲೆ ಹತ್ತಿ ಹಚ್ಚಡ ಸರಿಪಡಿಸುತ್ತಿದ್ದರು. ಕುರ್ಚಿಯ ಧೂಳೊರೆಸುತ್ತಿದ್ದರು. ಉರಿಯುತ್ತಿದ್ದ ಊದುಬತ್ತಿಯನ್ನಾರಿಸಿ ಮತ್ತೆ ಕಡ್ಡಿ ಕೊರೆದು ಹಚ್ಚುತ್ತಿದ್ದರು. ಸರಿಯಾಗಿದ್ದ ಮೈಕನ್ನು ಮೇಲೆತ್ತಿ, ಕೆಳಗಿಳಿಸಿ "ಹಲೋ....ಟೆಸ್ಟಿಂಗ್ ಎಂದು ಕೂಗಿ ಕೆಡಿಸುತ್ತಿದ್ದರು. ಆ ಮೈಕ್ "ಕೂ...."ಎಂದೆರಡು ನಿಮಿಷ ಅರಿಚುತ್ತಿತ್ತು. ಸಂತಸದ ನಗು ನಕ್ಕು ಮುಂದಿನ ಸಾಲಿನಲ್ಲಿದ್ದ ಮಹಿಳೆಯರ ಕಡೆಗೊಮ್ಮೆ ಕಣ್ಣು ಹಾಯಿಸಿ ಕೆಳಗಿಳಿಯುತ್ತಿದ್ದರು.

ಉಪ ಕಾರ್ಯದರ್ಶಿಗಳಿಗೆ "ಅವ್ರು ಬರೋವರೆಗೆ ಭಾಗವತರ ಸಂಗೀತ ನಡೆಯಲಿ" ಎಂದ, ಶಾಮಣ್ಣ. "ಅವ್ರೂ ಇನ್ನೂ ಬಂದಿಲ್ಲ" ಉತ್ತರ ಬಂದಿತು. ಮಹಿಳಾ ಕಾರ್ಯದರ್ಶಿಗೆ "ಸಿನಿಮಾ ಭಜನೆ ಹಾಡುತ್ತಿರಿ, ಬೇಗ ಬರ್‍ತೀನಿ" ಎಂದು ಹೇಳಿ ಹೊರಗೋಡಿಬಂದು ಬೀಡಿ ಸೇದುತ್ತಿದ್ದ ಡ್ರೈವರನೊಬ್ಬನ ಕೈಗೆ ಛಾಕೋಲೇಟ್ ತುರುಕಿ ಯಾರದೋ ಖಾಲೀ ಕಾರನ್ನು ಹತ್ತಿ ಕುಳಿತ. "ಚಾಮರಾಜಪೇಟೆಗೆ ಹೊಡಿ" ಎಂದು ಗೋಗರೆದು ಅಧ್ಯಕ್ಷರ ಮನೆಗೋಡಿಸಿದ.

* * * *

"ಸಾರ್....ಸಾರ್....ಸರ್ !"

"ಯಾರಪ್ಪಾ ಅದು, ಸಂಜೇ ಮನೇಗೆ ಧನಲಕ್ಷ್ಮಿ ಬರೋ ಹೊತ್ನಲ್ಲಿ.... ಮುಂದಕ್ಕೆ ಹೋಗಪ್ಪಾ !"

"ನಾನಮ್ಮ ಶಾಮಣ್ಣ....ಸಂಜೆ ಕಾರ್ಯಕ್ರಮಕ್ಕೇ...."

"ಓ ಹೊ ಹೊ ನೀವೇ,—ಬನ್ನೀಪ್ಪ ಕೂತುಕೊಳ್ಳಿ" ವರಾಂಡ ಗುಡಿಸುತ್ತಿದ್ದ ಅಮ್ಮಾವ್ರು ಪರಕೆ ಸಮೇತ ಬಾಗಿಲಿಗೆ ಬಂದು ಕರೆದರು. ಅನುಮಾನಿಸುತ್ತಲೇ ಶಾಮಣ್ಣ ಒಳಗೆ ಕಾಲಿಟ್ಟ.

"ಈಗ ಆರು ಗಂಟಗೆ ರಾಯರದ್ದೇ ಭಾಷಣ. ಇನ್ನೂ ಬಂದಿರಲಿಲ್ಲ....ಹ್ಯಾಗೋ ಏನೋ, ಕರಕೊಂಡು ಹೋಗೋಣಾಂತ...."

" ಹಯ್ಯೋ ಹುಚ್ಚು ನಿಮ್ಗೆ. ಆರುಗಂಟ್ಗೇ ಅಂದ್ರೆ ಅವ್ರು ಬರೋದು ಎಂಟು ಗಂಟ್ಗೇನೇ. ಐದು ಗಂಟೇಲಿ ಯಾರದೋ ಟೀಪಾರ್ಟಿಗೇಂತ ಹೋದ್ರು........ಲೇ ಮಂಜೂ........ಕಾಫಿ ತೊಗೊಂಡ್ಬಾಮ್ಮ—ಶಾಮರಾಯ್ರು ಬಂದಿದಾರೆ!"

"ಅಯ್ಯೋ ಈಗದೆಲ್ಲಾ ಬೇಡಮ್ಮ. ನಾನಿನ್ನು ಸಂಗೀತಕ್ಕೆ ಭಾಗವತರ್ನ ಕರೆಕೊಂಡು ಬರ್ಬೇಕು........ಅವ್ರೂ ಇನ್ನೂ ಬಂದಿಲ್ಲ!....ಹ್ಯಾಗಾಗುತ್ತೋ ಇವತ್ತಿನ ಕಾರ್ಯಕ್ರಮ........

"ನೀವು ಕಾರ್ಯದರ್ಶಿಗಳೂಂದ್ಮೇಲೆ ಕೇಳೋದೇನು? ಎಲ್ಲಾ ಸರಿಯಾಗೇ ನಡೆಯುತ್ತೆ ಮಂಜೂ—ಬೇಗ ಬಾರೇ ಅದೇನು ಅಮ್ಮ ನಾಚ್ಕೆ—ನೋಡೀಪ್ಪ ಮಂಜು ಒಬ್ಳೇ ಮಗ್ಳು ನಂಗೆ. ಹಾಡುಹಸೆ ಎಲ್ಲಾ ಬರುತ್ತೆ. ನಿಮ್ಮ ತಂದೆಯವ್ರನ್ನ ನೋಡೀಂತ ಒಂದು ತಿಂಗ್ಳಿಂದ ಹೇಳ್ತಿದೀನಿ, ನನ್ನ ಮಾತಿಗೆ ಕಿವಿಗೊಟ್ರೆ ತಾನೇ ಇವ್ರು"

ಮಂಜುಳ ಶಾಮೂನ ಕೈಲಿ ಲೋಟ ಕುಕ್ಕಿ ಒಳಗೋಡಿದಳು. ಆತುರಾತುರವಾಗಿ ಗುಟುಕಿಸಿ ಹೊರಡಲೆದ್ದುನಿಂದ ಶಾಮಣ್ಣ.

"ತುಂಬಾ ಥ್ಯಾಂಕ್ಸ ಬರ್ತೀನಿನ್ನು"

"ಹೋಗೋರಂತೆ ಕೂತ್ಕೋಳ್ಳಿ ಹ್ಯಾಗಿದಾಳೆ ಮಂಜು....ಏನೋ ನೀವು ಒಪ್ಪಿ ಬಿಟ್ರೆ ಮುಂದಿನ ವೈಶಾಖದಲ್ಲೇ ಲಗ್ನ...."

"ಅಮ್ಮ ನಂಗೆ ಹೋದ ವೈಶಾಖದಲ್ಲಿ ಆಯ್ತು ಮದ್ವೆ. ಆಗಲೇ ನನ್ನಾಕೆ ತವರು ಮನೇಗೆ ಬಾಣಂತನಕ್ಕೆ ಹೋಗಿ ಎರಡು ತಿಂಗ್ಳಾಯ್ತು....ನಿಮ್ಮ ಜಮಾನ್ರು ಬಂದಕೂಡ್ಲೆ ಹೇಳಿ ನಾಬಂದಿದ್ದೆಂತ. ಭಾಗವತರ ಜೊತೇಲೆ ಅವ್ರನ್ನು ಕರೆದು ಕೊಂಡು ಹೋಗ್ತೀನಿ ಕಾರ್ನಲ್ಲಿ" ಓಡೋಡಿ ಕಾರಿನಲ್ಲಿ ಕುಳಿತು ಬೆವರೊರೆಸುತ್ತಾ ಹೇಳಿದ ಡ್ರೈವರ್‌ಗೆ "ಹೊಡಿ ಬಸವನಗುಡೀಗೆ"

ಸ್ವಾಮಿ....ಸ್ವಾಮಿ...."

ಹಲೋ ಬನ್ನಿ ಕೂತ್ಕೊಳಿ ಶಾಮರಾಯ್ರು. ಟೈಮಾಯ್ತು ರಾಯ್ರು? ನನ್ನ ಪ್ರೊಗ್ರಾಂ ಎಷ್ಟೊತ್ತಿಗೆ? ಎಂಟು ಗಂಟೇಗಲ್ವೆ?"

"ಅಲ್ಲ ಸ್ವಾಮಿ. ಏಳುಗಂಟೆಗೆ. ಏಳೂವರೇಗಾದ್ರೂ ಶುರು ಆಗ್ಲೇಬೇಕು ನಿಮ್ಮ ಸಂಗೀತ"

“ಓ ಎಸ್ ಆದಕ್ಕೇನು ...ಹಹ—ಸ್ವಲ್ಪ ಮುಖನೋಡಿ ಸಾಮಿ ಸರಿಯಾಗಿದೆ public appearance ಗೆ ?”

”ಓಹೊಹೋ ಸರಿಯಾಗಿದೆ....ನೀವು ಬೇಗೇಳಿ”

“ಗಡ್ಡ ಕೆನ್ನೆ ಸವರಿಕೊಳ್ಳುತ್ತಾ ಭಾಗವತರು ಹೇಳಿದರು” ಹಹ—ನೀವೂ ಪರ್ವಾಗಿಲ್ವಾ ಸ್ವಾಮಿ....ನಾನು ಹೀಗೆ ಎರಡಂಗುಲ ಗಡ್ಡ ಬಿಟ್ಟುಕೊಂಡು ಬಂದ್ರೆ ಯಾರಾದ್ರೂ ಮೆಚ್ಚತಾರ್ಯೆ ಸಂಗೀತಾನಾ !

“ಸ್ವಾಮೀ....ಸ್ವಾಮಿ....” ಶಾಮಣ್ಣ ಗೋಗರಿಯುತ್ತಿದ್ದಂತೆಯೇ ಭಾಗವತರು ಗಡ್ಡಕ್ಕೆ ಸೋಪು ಹಚ್ಚಿದರು. ಎಲ್ಲಿಂದಲೋ ಗಡಿಯಾರವೊಂದು ಡೆಂಗ್ ಎಂದಿತು.

“ಸ್ವಾಮೀ....ಆಗ್ಲೇ ಆರೂವರೆ”

“ಬಂದೆ ಬಂದೆ. ಏನು ಗಾಬರೀ ಬೀಳ್ಬೇಡಿ ಹತ್ತೇ ನಿಮ್ಷ” ಇಪ್ಪತ್ತು ನಿಮಿಶದ ನಂತರ ಸರ್ವಾಲಂಕಾರ ಭೂಷಿತರಾಗಿ ಕಾರಿನ ಕಡೆ ಹೊರಟರು. ಉದ್ದ ನಿಟ್ಟಿಸುರು ಬಿಡುತ್ತಾ ಡ್ರೈವರ್‌ಗೆ “ಹೊಡಿ ನಮ್ಮ ಸಭಾಮಂದಿರಕ್ಕೆ” ಅಂದ ಶಾಮಣ್ಣ. ಕೂಡಲೇ ಭಾಗವತರು “ಅದ್ಹೇಗೆ ಆಗುತ್ತೆ ಸ್ವಾಮಿ. ಪಿಟೀಲಿನವ್ನು ತಬಲದವ್ನು ಇಲ್ದೆ ನಾನ್ಹೇಗೆ ಹಾಡ್ಲಿ. ಶುದ್ಧ ಅಯೋಗ್ಯರು ಇನ್ನು ಬಂದಿಲ್ಲ ಅವ್ರು. ನಡೀರಿ ರಾಯ್ರೇ ಹಾಗೇ ಅವ್ರನ್ನಾ ಕಾರ್ನಲ್ಲೆ ಕರಕೊಂಡು ಹೋಗೋಣ”.

ಕಾರು ಜಯನಗರದಲ್ಲಿ ಪಿಟೀಲಿನವನನ್ನು, ಕಂಟೋನ್ಮೆಂಟಿನಲ್ಲಿ ಡೋಲಿನವನನ್ನು ತುಂಬಿಕೊಂಡು ಮತ್ತೆ ಚಾಮರಾಜಪೇಟೆಗೆ ಅಧ್ಯಕ್ಷರ ಮನೆಗೆ ಬಂದಿತು ಏಳೂವರೆಗೆ.

“ಬಂದೆ ಶಾಮರಾವ್....ಸ್ಸಾರಿ ಹೊತ್ತಾಗೋಯ್ತು. ಬೇಡಾಂದ್ರೂ ಬಿಡ್ಲಿಲ್ಲ. ಯಾರ್ದೋ ಟೀಪಾರ್ಟಿಗೆ ಎಳಕೊಂಡು ಹೋಗಿಬಿಟ್ರು.” ಎನ್ನುತ್ತಾ ಕಾರು ಹತ್ತಿದರು. ಒಳಗೆ ಜಾಗ ಸಾಲದೆ ಶಾಮಣ್ಣ ಅಧ್ಯಕ್ಷರನ್ನು ಹತ್ತಿಸಿದ. ತಾನು ಒಂದುಕಡೆ ಸೀಟಿನ ಬುಡದಲ್ಲಿ ತಂಬೂರಿ, ಪಿಟೀಲು, ಡೋಲುಗಳ ನಡುವೆ ಕುಳಿತ.

ಎಂಟು ಗಂಟೆಗೆ ಸರಿಯಾಗಿ ಸಭಾಧ್ಯಕ್ಷರು ಸ್ಟೇಜ್ ಹತ್ತಿದರು. ಎದುರಿಗೆ ನೋಡಿದರು. ಸಭೆಯೆಲ್ಲ ಖಾಲಿ! ಜನ ಆಗಲೇ ರಾತ್ರಿಯೂಟ ಹೊಡೆದು ಎಲಡಿಕೆ ಮೇಯುತ್ತಿದ್ದರು ಮನೆಗಳಲ್ಲಿ.

ಕಾರಿನ ಮಾಲೀಕರು ಹಿಂದಿನಿಂದ ಶಾಮಣ್ಣನ ತಲೆಗೆ ಹೊಡೆದು ಕೇಳಿದರು. “ನನ್ನ ಕೇಳದೆ ಹ್ಯಾಗೆ ತೊಗೊಂಡು ಹೋದಿರ್ರೀ ನನ್ನ ಕಾರ್ನ ?”

ಅಧ್ಯಕ್ಷರು, ಭಾಗವತರು ಅವರ ಸಂಸಾರವನ್ನೆಲ್ಲಾ ಅಲ್ಲೇ ಬಿಟ್ಟು, ಹಿಂದಿನ ಬಾಗಿಲಿನಿಂದ ಮೆಲ್ಲನೆ ಮನೆ ಸೇರಿದ ಶಾಮಣ್ಣ ಈರುಳ್ಳಿ ಹುಳಿ ತಿನ್ನಲು.

ಹ. ಸು.

ಮನೆ ಬಾಡಿಗೆಗೆ ಇದೆಯೆ ?

ಕೆಲವು ತಿಂಗಳ ಹಿಂದೆ ನಾನು ಹಾಸನದಲ್ಲಿ ಸಂಸಾರ ಮಾಡಿಕೊಂಡಿದ್ದೆ. ನನ್ನ ಹೆಂಡತಿ ತವರೂರು ಬೆಂಗಳೂರು. ಹಾಸನ ಹಳ್ಳಿಕೊಂಪೆ, ಪಟ್ಟಣವಾಸದ ಸುಖಭೋಗ ಬೇಕು ಎಂದು ನನ್ನ ಹೆಂಡತಿಗೆ ಬಯಕೆ–ನನಗೆ ಸಂಕಟ. ಸರಿ; ಬೆಂಗಳೂರಿಗೆ ಹೇಗೋ ವರ್ಗ ಮಾಡಿಸಿಕೊಂಡೆ. ಸಂಸಾರವನ್ನು ಹಾಸನದಲ್ಲೆ ಬಿಟ್ಟು, ಇಲ್ಲಿಗೆ ಬಂದು, ಸಹಜವಾಗಿಯೆ ಮಾವನವರ ಮನೆಯಲ್ಲೆ ಬಿಡಾರಮಾಡಿ, ಮನೆ ಹುಡುಕುವ ಕೆಲಸದಲ್ಲಿ ತೊಡಗಿದೆ.

ಇಂಥ ದೊಡ್ಡ ನಗರ. ಕ್ಷಣ ಕ್ಷಣಕ್ಕೂ ಬೆಳೆಯುತ್ತಿದೆ. ಎಲ್ಲೆಲ್ಲಿ ನೋಡಿದರೂ ಹೊಸ ಮನೆಗಳು ಸೃಷ್ಟಿಯಾಗುತ್ತಿವೆ. ಸ್ವಲ್ಪ ಅವಕಾಶವಿದ್ದರೆ ಸಾಕು, ಹಳೆಯ ಮನೆಗಳ ಸುತ್ತಲೂ ಉಪಗೃಹಗಳು ಹುಟ್ಟುತ್ತಿವೆ. ಇನ್ನೂ ಹಳೆಯ ಮನೆಗಳು, ಅಣುಪ್ರಾಣಿಯಂತೆ ಒಂದೊಂದೂ ಒಡೆದು ಎರಡಾಗಿ, ಎರಡು ನಾಲ್ಕಾಗಿ, ವೃದ್ಧಿಯಾಗುತ್ತಿವೆ. ಆದುದರಿಂದ ಮನೆ ಸಿಗುವುದು ನಿರಾಯಾಸ ಎಂದು ಶುಭ ಪ್ರತೀಕ್ಷೆ ಹೊಂದಿದ್ದೆ.

ಬಂದ ಮೂರನೇ ದಿನವೇ H.R.C. ಕಛೇರಿಗೆ ಹೊರಟೆ. ದಾರಿಯಲ್ಲಿ ನನ್ನ ತಂದೆಯವರ ಮಿತ್ರರೊಬ್ಬರು ಸಿಕ್ಕಿ ಬಹಳ ವಾತ್ಸಲ್ಯದಿಂದ ಎಲ್ಲರ ಯೋಗಕ್ಷೇಮ ವನ್ನೂ ವಿಚಾರಿಸಿದರು. ಕಛೇರಿಗೆ ತಡವಾಗ ಬಾರದೆಂಬ ತವಕದಲ್ಲಿದ್ದೆ. ಆದರೂ ಆ ಹಿರಿಯರು ಅಷ್ಟು ಪ್ರೀತಿಯಿಂದ ಎಲ್ಲ ವಿವರಗಳನ್ನೂ ಸಾವಧಾನವಾಗಿ ವಿಚಾರಿಸಿಸುತ್ತಿದ್ದುದರಿಂದಲೂ, ಹಳೆಯ ಪ್ರಸಂಗಗಳನ್ನು ಇನ್ನೂ ಸಾವಧಾನವಾಗಿ ನೆನೆಯುತ್ತಿದ್ದುದರಿಂದಲೂ, ಎಲ್ಲಿ ಶುಭ ಸೂಚನೆಗಳೆಂದು ನಿಂತೆ. ಕಾಲಕ್ರಮದಲ್ಲಿ, ನಾನು ವರ್ಗವಾಗಿ ಬಂದವನೆಂದು ನಿಧಾನವಾಗಿ ಅರ್ಥವಾದಾಗ, ಅವರ ಮುಖಭಾವ ಒಂದು ಬಣ್ಣ ಗುರುತರವಾಯಿತು, ಧ್ವನಿ ಮಂದ್ರವಾಯಿತು. ಹಾಗೇ ಒಂದು ನಿಮಿಷ ಸಮಾಧಿಸ್ಥರಾಗಿ, ತರುವಾಯ, "H R C. ಕಛೇರಿಗೆ ಹೊರಟಿದ್ದೆ ಯೇನೋ ?" ಎಂದು ಕುರಿತ ಏಟು ಹೊಡೆದು, "ಹೊತ್ತಾಗಬಾರದು, ಹೋಗು." ಎಂದು ನನ್ನನ್ನು ತಕ್ಷಣ ಕಳುಹಿಸಿ, ತಾವು ಅವಸರ ಅವಸರವಾಗಿ ನಡೀತಿದ್ದರು.

ಕಛೇರಿಗೆ ಹೋಗಿ, ನನಗೆ ಎಟುಕುವ ಬಾಡಿಗೆಯುಳ್ಳಿನ ಒಂದೆರಡು ಮನೆಗಳ ಗುರುತು ಹಾಕಿಕೊಂಡು, ಅಗತ್ಯವಾದ ಅರ್ಜಿಗಳನ್ನು ಬರೆದುಕೊಂಡೆ. ಅಷ್ಟು ಹೊತ್ತಿಗೆ ಮಧ್ಯಾಹ್ನವಾಗಿತ್ತು. ಬಿಡಾರಕ್ಕೆ ಬಂದು, ಊಟ ಮುಗಿಸಿ, ಮನೆಗಳನ್ನು ಪರೀಕ್ಷೆಮಾಡಿ, ಒಪ್ಪಿಗೆಯಾದ ಮನೆಯ ಒಡೆಯನ ಅನುಮತಿಯನ್ನು ಪಡೆಯಲು ಹೊರಟೆ. ಅಲೆದೆ, ಬಳಲಿದೆ. ಆದರೆ ಬೇರೆಯವರು ಯಾರೊ ನನಗಿಂತ ಮುಂಚಿತ ವಾಗಿದ್ದರು. ಇಂಥ ಅನುಭವ ಮುಂದೆ ಎಷ್ಟೋಸಲ ಆಯಿತು.

ದಿನದ ಮೇಲೆ ದಿನ ಉರುಳಿತು. ಕಛೇರಿಗೆ ಹೋಗಿ ವಿಳಾಸ ಬರೆದುಕೊಳ್ಳು ವುದು, ಅಲ್ಲಿಂದ ಮಾಲಿಕರ ಸಂದರ್ಶನಾರ್ಥ ನಾಯಿಪಾಡು ಪಡುವುದು-ಇದು ಬಿಡುವಿಲ್ಲದೆ ನಡೆಯಿತು. ಏನೂ ಫಲ ದೊರೆಯಲಿಲ್ಲ. ಆಗ ಬಿಲ್ಲಿಗೆ ಇನ್ನೊಂದು ಬಾಣ ಹೂಡಿದೆ–ಪ್ರಭಾವಶಾಲಿಗಳಾದ ಬಂಧು ಮಿತ್ರರ ಸಹಾಯವನ್ನು ಕೋರಿದೆ. ನನ್ನ ಭಾವನವರೊಬ್ಬರು ಡಾಕ್ಟರು, ಅವರಿಗೆ ಎಷ್ಟೋಜನ ಋಣಿಗಳಿರುತ್ತಾರೆ ಎಂದು ಅವರನ್ನು ಆಶ್ರಯಿಸಿದೆ. "ಸಣ್ಣಮನೆ ಆದರೆ ಸಾಕು-2 ರೂಮು, 1 ಹಾಲು, ಊಟದ ಮನೆ, ಅಡಿಗೆ ಮನೆ, ಬಚ್ಚಲು ಮನೆ, ದೇವರ ಮನೆ–ಒಂದು ಪಕ್ಷ ಇದು ಇಲ್ಲದೆ ಇದ್ದರೂ ಆಗುತ್ತೆ. ಅಂತೂ ಇಷ್ಟಾದರೆ ಸಾಕು. 40 ಬೇಕಾದರೂ ಬಾಡಿಗೆ ಕೊಡುತ್ತೇನೆ." ಎಂದೆ. "ಅಷ್ಟಾದರೆ ಸಾಕು, ಅಲ್ಲವೆ? ಅಂದರೆ 40 ರೂಪಾಯಿಗೆ 80 ರೂಪಾಯಿನ ಮನೆ ಆದರೆ ಸಾಕು ಅನ್ನು." ಎಂದಾಗ ಒಂದು ಕ್ಷಣ ನನ್ನ ಹೃದಯಕ್ರಿಯೆ ನಿಂತಿತು.

ಸ್ನೇಹಿತರ ಮನೆಗಳಿಗೆ ಹೋದೆ. ಅವರೆಲ್ಲರೂ ಭರವಸೆ ಕೊಟ್ಟರು. ಪ್ರತಿ ಯೊಬ್ಬನೂ, "ಓಹೋ! ಅದಕ್ಕೇನಂತೆ! ಖಂಡಿತವಾಗಿ. ನೋಡು, ನೀನು ಎಷ್ಟು ಅಂತ ನಮ್ಮನ್ನ ಹುಡುಕಿಕೊಂಡು ಅಲೀತೀಯ? ನಿನ್ನ ಅಡ್ರೆಸ್ ಕೊಡು. ಯಾವುದಾದರು ಸಿಕ್ಕಿದ ತಕ್ಷಣ ಬರೀತೀನಿ." ಎಂದು. ಅವರ ಪತ್ರಗಳನ್ನು ಇನ್ನೂ ನಿರೀಕ್ಷಿಸುತ್ತಿದ್ದೇನೆ.

ದಾರಿಯಲ್ಲಿ ಕಂಡ ಮಿತ್ರರನ್ನು ಹಿಡಿದೆ. ಅಷ್ಟು ಹೊತ್ತಿಗೆ ಉಪಾಯವನ್ನು ಕಲಿತಿದ್ದೆ. ಕಂಡ ತಕ್ಷಣ ನನ್ನ ಆವಶ್ಯಕತೆಯನ್ನು ತೋಡಿಕೊಂಡು ಅವರ ಗುಂಡಿಗೆ ಒಡೆಯುವುದರ ಬದಲು, ಅದು ಇದರ ವಿಚಾರ ಲೋಕಾಭಿರಾಮವಾಗಿ ಮಾತಾಡುತ್ತ ಕ್ರಮಕ್ರಮವಾಗಿ ನನ್ನ ಕಷ್ಟವನ್ನು ನಿವೇದಿಸಿಕೊಂಡೆ. ಆದರೇನಂತೆ? ನಗುತ ನಗುತ ಸ್ನೇಹಭಾವದಿಂದ ಮಾತಾಡಲುಪಕ್ರಮಿಸಿದ ಅವರು, ನಾನು ಮನೆಯ ಮಾತೆತ್ತಿದ ತಕ್ಷಣ, ಯಾವುದೊ ಜರೂರಾದ ಕಾರ್ಯವನ್ನು ತಟಕ್ಕನೆ ಜ್ಞಾಪಿಸಿ ಕೊಂಡು, ಸೈಕಲ್ಲು ಹತ್ತಿ ಕಣ್ಮರೆಯಾಗುತ್ತಿದ್ದರು. ಒಬ್ಬ ಮಿತ್ರ, "ಬೆಂಗಳೂರಲ್ಲಿ ಅವರವರ ತಾಪತ್ರಯ ಅವರವರಿಗೆ. ಅವರ ಪಾಡು ಅವರು ನೋಡಿಕೊಂಡರೆ

ಸಾಕು. ಇತರರ ಮೇಲೆ ಭಾರ ಹಾಕಿದರೆ ನಿನ್ನ ಕೆಲಸ ಆಗುವುದಿಲ್ಲ. ಸ್ವಾವಲಂಬಿಯಾಗಿರಬೇಕು." ಎಂದು ಉಪದೇಶಿಸಿದ. ಇನ್ನೊಬ್ಬನಂತೂ, "ತೆಪ್ಪಗೆ ಹಾಸನದಂಥ ಕಡೆ ಇರದೆ, ಇಲ್ಲಿಗೇಕೊ ಬಂದೆ, ಮಂಕೆ? ನೀನು ಬರುತೀಯ ಅಂತ ನಿನಗೋಸ್ಕರ ಮನೆಗಳನ್ನು ಕಟ್ಟಿಕೊಂಡು, ನಾಮುಂದು ತಾಮುಂದು ಅಂತ ಕಾಯುತಾ ಇದಾರೆ ಅಂದುಕೊಂಡೆಯ?" ಎಂದು ಮೂದಲಿಸಿದ.

ನನ್ನ ಸಹೋದ್ಯೋಗಿಗಳೂ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು. ಒಬ್ಬರು ಎಂದರು, "ಬಾಡಿಗೆಗೆ ಮನೆ ಸಿಗುವುದಕ್ಕೆ ಮುಂಚೆ ಕೊಂಡುಕೊಳ್ಳಬಹುದ್ರೀ. ಹಾಗೆ ಮಾಡ್ರಿ." ಇನ್ನೊಬ್ಬರು ಹೇಳಿದರು, "ಇಲ್ಲಿ ಬಾಡಿಗೆ ತೆತ್ತು ನಿಭಾಯಿಸುವುದಕ್ಕೆ ಆಗೊಲ್ಲ. ಸೈಟು ಕೊಂಡು ಮನೆ ಕಟ್ಟಿಬಿಡಿ." ಮೂರನೆಯವರು, "ಇಷ್ಟೆಲ್ಲ ಏಕೆ? ಸುಖವಾಗಿ ಮಾವನ ಮನೆಯಲ್ಲೆ ಇದ್ದುಬಿಡಬಹುದಲ್ಲ." ಎಂದರು. ಅದಕ್ಕೆ ಮತ್ತೊಬ್ಬರು ಗೊಳ್ಳನೆ ನಕ್ಕು, "ಇವರ ಸಂಸಾರ ಭಾರೀದು ಕಣ್ರೀ. ಆಮೇಲೆ ಇವರ ಅತ್ತೆ ಮಾವನೇ ಮನೆ ಹುಡುಕಿಕೊಂಡು ತಿರುಗಬೇಕಾಗುತ್ತೆ!" ಎಂದು ಹಾಸ್ಯ ಮಾಡಿದರು.

ನಾನು ಕಛೇರಿಗೆ ಅರ್ಜಿ ಹಾಕಿದ್ದೂ ಹಾಕಿದ್ದೆ. ಆದರೆ ಇತರ ಅರ್ಜಿದಾರರ ಹಕ್ಕು ನನ್ನದಕ್ಕಿಂತಲೂ ಉತ್ತಮವಾಗಿತ್ತು. ಏತನ್ಮಧ್ಯೆ, ಮಲ್ಲೇಶ್ವರದಲ್ಲಿ ಒಂದು ಮನೆ ಇದೆ, ಮಾಲಿಕರೆ ಅದನ್ನು ತಮಗೆ ಬೇಕಾದವರಿಗೆ ಕೊಡಬಹುದು ಎಂದು ಅಧಿಕಾರಿಗಳು ಅಪ್ಪಣೆ ಕೊಟ್ಟಿದ್ದಾರೆ, ಎಂಬ ವರ್ತಮಾನ ಬಂದಿತು. ಪತ್ತೆ ತರದೂದು ನಡೆಸಿ, ಮಾಲಿಕರ ವಿಳಾಸ ತಿಳಿದುಕೊಂಡು, ಎಡಿಯೂರಿನಿಂದ ಹೊರಟೆ, ಸ್ನೇಹಿತನೊಬ್ಬನನ್ನು ಕಟ್ಟಿಕೊಂಡು, ಮಲ್ಲೇಶ್ವರದ 5ನೇ ಕ್ರಾಸಿಗೆ, ಮಾಲಿಕರ ಮನೆಗೆ. ನನ್ನ ಕೂಗು ಕೇಳಿ ಅವರೆ ಬಂದರು-ಭವ್ಯವಾದ ಆಕಾರ; ಸುಂದರ ಮುಖ, ವಿಶಾಲವಾದ ಬಿಳಿಯ ಹಣೆಯ ಮೇಲೆ ಕೆಂಪುನಾಮದ ಅಲಂಕಾರ, ಕೆಂದುಟಿಗೆ ತಾಂಬೂಲದ ರಂಗು.—ಮನಸ್ಸಿಗೆ ನೆಮ್ಮದಿ ಕೊಡುವಂತ ದೃಶ್ಯ. ವಿನಯವಾಗಿ ಬರಮಾಡಿಕೊಂಡರು. ನಿವೃತ್ತ ಇಂಜಿನಿಯರ್ ಅಂತೆ. "ಏನು ದಯಮಾಡಿಸಿದಿರಿ?" ಎಂದು ಕೇಳಿದರು.

"ತಮ್ಮದೊಂದು ಮನೆ ಬಾಡಿಗೆಗಿದೆಯಂತೆ." ಎಂದೆ.

ಅವರು ಒಂದು ನಿಮಿಷ ಮಾತಾಡದೆ, ನನ್ನನ್ನೂ ಸ್ನೇಹಿತನನ್ನೂ ಕಣ್ಣಿನಿಂದ ಅಳೆದರು. "ಎಷ್ಟು ಜನ ಇದೀರಿ ನಿಮ್ಮ ಮನೇಲಿ?" ಎಂದರು.

ಮನೆ ತೀರ ಕಿಷ್ಕಿಂಧವೇನೊ ಎಂದು ಭಯವಾದರೂ ನಿಜ ಹೇಳಿದೆ. "ನಾನು, ನನ್ನ ಹೆಂಡತಿ, ಇಬ್ಬರು ತಮ್ಮಂದಿರು, ಆರು ಜನ ಮಕ್ಕಳು."

ಮಕ್ಕಳಲ್ಲಿ ಪುಟ್ಟ ಪುಟ್ಟವರು ಎಂದು ಸೇರಿಸಿದೆ, ಮನಸ್ಸಿನಲ್ಲೇ "ಬಿಡತು" ಎಂದುಕೊಳ್ಳುತ್ತಾ.

"ಸರಿ ಒಳ್ಳೆಯದೆ. ತಮ್ಮ ಸಂಬಳ ಏನು? ಕೇಳಬಹುದೆ?"

"ಎಲ್ಲ ಒಟ್ಟು ಇನ್ನೂರು ಮೂವತ್ತುರೂಪಾಯಿ."

"ಹಾಗಾದರೆ ಮನೆ ತಮಗೆ ಸರಿ ಹೋಗೊಲ್ಲ."

"ಸರಿ ಹೋಗುತ್ತೊ ಬಿಡುತ್ತೊ, ಅದನ್ನ ಹೇಳೋದು ನಮಗೆ ಬಿಟ್ಟದ್ದು ಸಾರ್. ಮನೆನೋಡಿ ಒಪ್ಪಿಗೆಯಾದರೆ ಆಗಬಹುದು, ಇಲ್ಲದಿದ್ದರೆ ಬೇಡ, ಅನ್ನುತ್ತೀವಿ." ಎಂದು ನನ್ನ ಸ್ನೇಹಿತ ಸ್ವಲ್ಪ ಬಿರುಸಾಗೇ ಹೇಳಿದ.

ಅವರು ಮುಗುಳುನಗೆ ನಗುತ್ತಾ,, "ಆಗತ್ಯವಾಗಿ ನೋಡುವಿರಂತೆ. ಸ್ವಲ್ಪ ಕುಳಿತುಕೊಳ್ಳಿ." ಎಂದು ಸೋಫಾಗಳಮೇಲೆ ಕುಳ್ಳಿರಿಸಿ, ಕಾಫಿ ಮಾಡಿಸಿಕೊಟ್ಟು, ತರುವಾಯ ನಮ್ಮನ್ನು 18 ಕ್ರಾಸಿಗೆ ನಡೆಸಿಕೊಂಡು ಬಂದರು—ಅನ್ಯೋನ್ಯವಾಗಿ, ವಿನೋದವಾಗಿ ಮಾತಾಡಿಸುತ್ತ, ಕಡೆಗೆ ಒಂದು ದೊಡ್ಡ ಮಹಡಿಮನೆ—ಕಿಟಕಿ ಬಾಗಿಲೆಲ್ಲ ಹಾಕಿತ್ತು. ಪ್ರಬಲವಾದ ಶಂಕೆ ಮೂಡಿ, "ಔಟ್‌ ಹೌಸ್ ಇರುವ ಹಾಗೆ ಕಾಣಲಿಲ್ಲವಲ್ಲ." ಎಂದೆ.

"ಇಲ್ಲ, ಆದರೆ ಇದೇನೇ ಮನೆ. ಬಾಡಿಗೆ ೪೦೦ ರೂಪಾಯಿ." ಎಂದರು.

"ಹಾಗಾದರೆ ನಮಗೆ ಸರಿಹೋಗುಲ್ಲ. ಸುಮ್ಮನೆ ತೊಂದರೆ ಕೊಟ್ಟೆವು." ಎಂದೆ.

ಛೇ! ಛೇ! ಎಲ್ಲಾದರೂ ಉಂಟೆ!... ಏಕೆ ಹೊರಟೇಬಿಟ್ಟರಿ! ಮನೆ ನೋಡೋದಿಲ್ಲವೆ?....ಇಷ್ಟು ದೂರ ಬಂದಿದ್ದೀರಿ. ಹೀಗೆ ದಯಮಾಡಿಸಿ." ಎಂದು ವಿನಯದಿಂದ ನಿರ್ಬಂಧಿಸಿದರು.

ಆ ಮನೆಯ ಪ್ರತಿಯೊಂದು ಭಾಗ ವಿಭಾಗವನ್ನೂ ನೋಡಿ ಹೊರಗೆ ಬರುವುದಕ್ಕೆ ಸುಮಾರು ಒಂದು ಘಂಟೆ ಹಿಡಿಯಿತು. ಅಷ್ಟು ಹೊತ್ತೂ ಯಜಮಾನನ ವಿವರಣೆ ಪ್ರಶಂಸೆಗಳ ಶಬ್ದ ಸಂಗೀತದಿಂದ ನನಗೂ ಸ್ನೇಹಿತನಿಗೂ ಮಂಕು ಬೂದಿ ಹಾಕಿದ ಹಾಗಾಗಿತ್ತು. ಯಜಮಾನನಿಗೆ ಅಲ್ಲೆ ಹ್ರಸ್ವ ನಮಸ್ಕಾರ ಹೇಳಿ ಬಂದುಬಿಟ್ಟೆವು. ಇನ್ನು ಮೇಲೆ ಪುನಃ ನಾನು ಆ ಬೀದಿಗೆ ಹೋಗುವಹಾಗೇ ಇಲ್ಲ.

ಈಗ ಒಂದು ಚಮತ್ಕಾರವನ್ನು ಯೋಚಿಸಿದ್ದೇನೆ. ಎಲ್ಲ ಪತ್ರಿಕೆಗಳಿಗೂ ಈ ಪ್ರಕಟಣೆಯನ್ನು ಕಳುಹಿಸಬೇಕೆಂದಿದ್ದೇನೆ?—

ಖಾಲಿ ಬೀಳಬಹುದಾದ ಮನೆಗಳ ಮಾಲೀಕರಲ್ಲಿ ವಿನಂತಿ. ತಮ್ಮ ಮನೆ ಖಾಲಿಯಾದ ಕಾಲದಲ್ಲಿ, H. R. C. ಗೆ ತಿಳಿಸುವಾಗ, ನನಗೂ ದಯವಿಟ್ಟು ತಿಳುವಳಿಕೆ ಕೊಡುವುದು. ಮನೆಯ ಅವಲಕ್ಷಣಗಳು, ಅನಾನುಕೂಲಗಳ ಬಗ್ಗೆ ನನ್ನದು ಯಾವ ಆಕ್ಷೇಪಣೆಯೂ ಇರುವುದಿಲ್ಲ. ಒಂದು ಪಕ್ಷ ನಲ್ಲಿ ಇಲ್ಲದಿದ್ದರೆ ನಷ್ಟವೇನಿಲ್ಲ! ಸೌದೆಗೆ ತೆರುವ ಕಷ್ಟವೇ ಉಳಿಯಿತು. ಅಡುಗೆಗೆ ಪಕ್ಕದ ಮನೆಯಿಂದ ನೀರು ತಂದರಾಯಿತು—ಅದೂ ಸ್ವಲ್ಪವೇ ಸಾಕು—ಈ ಕಾಲದಲ್ಲಿ ಒಪ್ಪತ್ತು ಊಟ ತಾನೆ. ದೀಪ ಇಲ್ಲದಿದ್ದರೆ ಆತಂಕವಿಲ್ಲ. ನನ್ನ ತಮ್ಮಂದಿರು ಮಕ್ಕಳು ಸ್ಕೂಲು ಕಾಲೇಜಿನಲ್ಲಿ ಕಲಿಯುವಂಥಾದೇನೂ ಇಲ್ಲ. ಕಲಿತಿರುವ ದುರ್ನಡತೆ ದುರ್ಭಾಷೆಗಳನ್ನು ಮರೆತರೆ ಸಾಕು. ಗೋಡೆಗಳಿಗೆ ಸುಣ್ಣ ಬಣ್ಣ ಬೇಕಾಗಿಲ್ಲ. ಪ್ರಪಂಚದ ಪುಂ—ಸ್ತ್ರೀ—ತಾರೆಗಳೆಲ್ಲರ ಚಿತ್ರಗಳಿಂದ ಮನೆಯನ್ನೆಲ್ಲ ಕಣ್ಣು ಕೋರೈಸುವಂತೆ ಮಾಡುತ್ತಾರೆ ನನ್ನ ಚಿರಂಜೀವಿಗಳು. ಎರಡು, ಮೂರು, ನಾಲ್ಕು (ವಾ ಅದಕ್ಕೂ ಮಿಗಿಲಾಗಿ) ಸಂಸಾರಗಳಿರುವ ವಠಾರಗಳಾದರೂ ಭಯವಿಲ್ಲ. ಅತಿ ಶೀಘ್ರದಲ್ಲೆ ಮಿಕ್ಕವರೆಲ್ಲ ಪಲಾಯನ ಮಾಡುವಂತೆ, ಬೇರೆ ಯಾರೂ ಬರದಂತೆ, ಮಾಡುವ ಶಕ್ತಿ ನನ್ನ ಹುಡುಗರಿಗಿರುವುದು ನನಗೆ ಅನುಭವಸಿದ್ಧವಾಗಿದೆ. (ಈ ವಾಕ್ಯ, ತಮ್ಮನ್ನು ಭಯಪಡಿಸುವುದಕ್ಕಲ್ಲ, ನನ್ನ ಸಮಾಧಾನಕ್ಕಾಗಿ, ಎಂದು ಭಾವಿಸುವುದು.) ಬಾಡಿಗೆಯನ್ನು ಮುಂಗಡವಾಗಿಯೇ ಕೊಡಲು ಸಿದ್ಧನಾಗಿದ್ದೇನೆ. ಹಾಗೆ ತೆಗೆದುಕೊಳ್ಳುವುದು ತಮಗೂ ಕ್ಷೇಮ. ನನಗೆ ಮನೆ ಒದಗಿಸಿಕೊಟ್ಟವರಿಗೆ ನಾನು ಕೊಡುವ ಪ್ರತಿಫಲ ಎಂದರೆ—ನನ್ನ ಹರಕೆ: ನೀವು ನೂರು ಕಾಲ ಬಾಳಿ. ನಿಮಗೆ ಎಲ್ಲ ಲಾಭಗಳೂ ದೊರಕಲಿ. ನಿಮ್ಮ ಪತ್ನಿಯ ಹುಬ್ಬು ಗಂಟು ಅಳಿಸಿ, ತುಟಿಯಮೇಲೆ ಮುಗುಳುನಗೆ ಮಿಂಚುತ್ತಿರಲಿ. ನಿಮಗೆ (ಈಗಿನ ಕಾಲಕ್ಕೆ ತಕ್ಕ ಹಾಗೆ) ಚಿನ್ನದಂಥ ಒಬ್ಬನೇ ಮಗ, ಬೊಂಬೆಯಂಥ ಒಬ್ಬಳೇ ಮಗಳು ಆಗಲಿ. ನಿಮ್ಮ ಹೊಟ್ಟೆ ತುಂಬಿರಲಿ.

—ಬೆ. ಚೆಂ.

ಅಹುದಾದರಹುಜನೆನ್ನಿ
ಇಲವಾದರಿಲವೆನ್ನಿ
ಎಂದು ಜಡ್ಜರು ಜ್ಯೂರಿಗೆ ಹೇಳಿದ್ದದ್ದಿರಬಹುದೇ?

* * * *

ಚೀಣೀ, ಹಿಂದೀ, ಭಾಯಿ ಭಾಯಿ
ಎಂದು ಈಗ ಹಿಮಾಲಯದಲ್ಲಿ ಬಾಯಿ ಬಾಯಿ ಬಿಡುತ್ತಿದ್ದಾರಂತೆ.

ಒಳ್ಳೆಯ ಗಿರಾಕಿ

ಚಾಮುಂಡೀಪುರಂ ನಿಲ್ದಾಣದಲ್ಲಿ ಕಂಡಕ್ಟರ್ ಮಹಾಶಯ "ರೈಟ್" ಎಂದು ಕತ್ತಿನ ನರಗಳನ್ನು ಉಬ್ಬಿಸಿ ಮುಖ ಕೆಂಪಗೆ ಮಾಡಿಕೊಂಡು ಕಿರುಚಿದ. ಬಸ್ ಹೊರಟಿತು ಮಾರ್ಕೆಟ್ ಕಡೆಗೆ. ಟಿಕೆಟ್ ತೆಗೆದುಕೊಂಡು ನನ್ನ ಜವಾಬ್ದಾರಿ ಕಳೆದುಕೊಂಡಿದ್ದೆ. ಟಿಕೆಟ್ ಚೀಟಿಯನ್ನು ಸುರಳಿಯಾಗಿ ಸುತ್ತಿ ಕಿವಿಯೊಳಗೆ ಸೇರಿಸುತ್ತಿದ್ದೆ. ಅಷ್ಟರಲ್ಲಿ ನನ್ನ ಪಕ್ಕದಲ್ಲಿ ಕೂತಿದ್ದ ಸಹಪ್ರಯಾಣಿಕ ಮಹಾಶಯ ಕೆಮ್ಮಿದ. ಪಕ್ಕಕ್ಕೆ ತಿರುಗಿ ನೋಡಿದೆ. ಸುಮಾರು ಐವತ್ತು ವರ್ಷ ವಯಸ್ಸಿನ ಒಂದು ಪುರುಷ ವ್ಯಕ್ತಿ ಶುದ್ಧ ಖಾದಿ ಧರಿಸಿ ಕುಳಿತಿತ್ತು. ಯಾರೋ ಪುಢಾರಿ ಇರಬೇಕೆಂದುಕೊಂಡೆ. ನನ್ನನ್ನು ನೋಡಿ 'ಆತ ಮತ್ತೊಂದು ಸಲ ಕೆಮ್ಮಿದ. ಸ್ವಲ್ಪ ಅನುಮಾನವಾಗಿ ಬಸ್ ನಂಬರು ನೋಡಿದೆ. ಒಂಬತ್ತನೇ ನಂಬರು ಬಸ್, "ಸ್ಯಾನಟೋರಿಯಂ"ಗೆ ಹೋಗುವುದು. ಸ್ವಲ್ಪ ಪಕ್ಕಕ್ಕೆ ಸರಿಯಲು ನೋಡಿದೆ, ಸಾಧ್ಯವಾಗಲಿಲ್ಲ. ನಿರಾಶನಾಗಿ ಮೇಲಕ್ಕೆ ಎದ್ದು ನಿಂತುಕೊಂಡೆ.

ವ್ಯಕ್ತಿ ಅಂದಿತು "ಪರವಾಗಿಲ್ಲ, ಕುಳಿತುಕೊಳ್ಳಿ ಜಾಗ ಇದೆಯಲ್ಲಾ ಇನ್ನು ಮಾರ್ಕೆಟ್‌ವರೆಗೂ ಏಕೆ ನಿಂತು ಹೋಗಬೇಕು? ನನ್ನ ಟಿಕೆಟ್ಟ್ ಬಣ್ಣ ನೋಡಿ ನಾನು ಮಾರ್ಕೆಟ್‌ನಲ್ಲಿ ಇಳಿಯುವನೆಂದು ಅದು ತೀರ್ಮಾನಿಸಿತ್ತು.

"ಮಾರ್ಕೆಟ್ ಏನು? ಇನ್ನೇನು ಸಿಕ್ಕುತ್ತೆ. ಇಳಿದು ಬಿಡಬಹುದು. ನೀವು, ಪಾಪ ಸ್ಯಾನಿಟೋರಿಯಂಗೆ ಹೋಗುವವರು ಕುಳಿತುಕೊಳ್ಳಿ" ಎಂದೆ ನಾನು.

"ನಾನೇ "ಸ್ಯಾನಿಟೋರಿಯಂ" ನಲ್ಲಿ ನನಗೇನು ಕೆಲಸ? ನಾನೂ ಮಾರ್ಕೆಟ್ಟಿನಲ್ಲೇ ಇಳಿಯುತ್ತೇನೆ" ಎಂದ ಆತ.

ಪೆಚ್ಚು ತಿಂದ ನಾನು ಬಾಯಿ ಮುಚ್ಚಿಕೊಂಡೆ.

ಮಾರ್ಕೆಟ್ಟಿನಲ್ಲಿ ನಾನೂ ಇಳಿದೆ, ಆತನೂ ಇಳಿದ. ಇಳಿದವನೇ ಹುಸಿನಗೆ ಬೀರುತ್ತಾ ನನ್ನನ್ನೇ ಹಿಂಬಾಲಿಸಿದ.

"ಹ್ಹ ಹ್ಹ. ತಾವು ಲಾಯರಂತೆ ಕಾಣುತ್ತೀರಿ. ಅಥವಾ ಅಡ್ವೊಕೇಟೋ ಲಾಯರೂ, ಪ್ಲೀಡರೂ, ಅಡ್ವೊಕೇಟ್‌ಗಳೂ ಎಲ್ಲಾ ಈಗಿನ ಕಾಲದಲ್ಲಿ ಒಂದೇ

ತರಹ ಕಾಣುತ್ತಾರೆ. ಈ ಪೈಕಿ ಯಾರು ಹೆಚ್ಚೋ ಯಾರು ಕಡಿಮೆಯೋ? ಯಾರು ಕೇಸು ಗೆಲ್ಲುತ್ತಾರೋ ಯಾರು ಸೋಲುತ್ತಾರೋ ಯಾರು ಗೆದ್ದರೇನು? ಯಾರು ಸೋತರೇನು? ಬರುವ ಫೀಜು ಬಂದೇ ಬರುತ್ತೆ, ಅಲ್ಲವೇ?" ಹೀಗೆ ಏನೇನೋ ಹೇಳುತ್ತಾ ಬಂದ ಆ ಪುಣ್ಯಾತ್ಮ.

ನನಗೂ ಒಂದು ಆಶಾಕಿರಣ ಕಂಡ ಹಾಗಾಯಿತು. ಒಂದು ತಿಂಗಳಿಂದ ನನ್ನ ಲಾಯರ ಆಫೀಸ್ ಕಡೆಗೆ ಒಂದು ವ್ಯಕ್ತಿಯಾದರೂ ಸುಳಿದಿರಲಿಲ್ಲ. ಈ ತಿಂಗಳು ಆಫೀಸ್ ಬಾಡಿಗೆಗೂ ಮಾವನ ಮನಿಯಾರ್ಡರ್ ಕಾಯಬೇಕಾಗಿತ್ತು. ಕೊನೆಗಾದರೂ ಒಂದು ಗಿರಾಕಿ ಸಿಕ್ಕಿತಲ್ಲಾ ಎಂದು ಮನಸ್ಸಿನಲ್ಲೇ ಹಿಗ್ಗಿದ್ದೆ. ಹೊಸ ಉತ್ಸಾಹದಿಂದ ಆ ಮಹಾನುಭಾವನನ್ನು ನನ್ನ ಆಫೀಸಿಗೆ ಕರೆದುಕೊಂಡು ಹೋಗಿ ಕೂರಿಸಿದೆ. ಆಫೀಸಿನಲ್ಲಿ ಲಾಯರು, ಲಾಯರ ಗುಮಾಸ್ತ, ಜವಾನ ಎಲ್ಲಾ ನಾನೇ ಆಗಿದ್ದರಿಂದ ಕಿಟಕಿ ಬಾಗಿಲುಗಳನ್ನು ತೆಗೆದು ಅನಂತರ ನನ್ನ ಜಾಗದಲ್ಲಿ ಬಂದು ಕುಳಿತುಕೊಂಡೆ.

"ಈಗ ಸಾವಧಾನವಾಗಿ ಹೇಳಿ ನಿಮ್ಮ ಕೇಸಿನ ವಿಷಯ. ಯಾವ ವಿಚಾರ ವನ್ನು ನನ್ನ ಮುಂದೆ ಮುಚ್ಚಬೇಡಿ" ಸ್ವಲ್ಪ ಗಂಭೀರವಾಗಿ ವ್ಯಕ್ತಿ ಗೌರವವನ್ನು ರಕ್ಷಿಸುತ್ತಾ ಹೇಳಿದೆ.

"ಅಂತಹ ಮುಚ್ಚುವ ವಿಚಾರ ಏನು ಬಂತು ಸ್ವಾಮಿ! ನಿಮ್ಮನ್ನು ನೋಡಿದೆನಲ್ಲಾ ನಿಮ್ಮಿಂದ ಒಂದು ಉಪಕಾರವಾಗಬೇಕಾಗಿತ್ತು. ಅದಕ್ಕೋಸ್ಕರ ನಿಮಗೆ ಈ ತೊಂದರೆ ಕೊಡುತ್ತಿದ್ದೇನೆ ಅಷ್ಟೆ" ಎಂದ ಆತ.

"ನನ್ನಿಂದ ಏನು ಉಪಕಾರ ಆಗಬೇಕಿತ್ತು ನಿಮಗೆ?" ನನ್ನ ಧ್ವನಿ ಸ್ವಲ್ಪ ತಗ್ಗಿತ್ತು.

"ಅದೇ ಹ ಹ್ಹಾ. ನಿಮ್ಮ ಕರೀ ಕೋಟು ನೋಡಿದೆ ಹ ಹ್ಹಾ ನಮ್ಮ ಹುಡುಗನ ಸೈಜು ನಿಮ್ಮ ಸೈಜುಬಂದೇ. ಕೋಟು ನಮ್ಮ ಹುಡುಗನಿಗೆ ಹೇಳಿ ಮಾಡಿಸಿದ ಹಾಗಿದೆ. ಅವನಿಗೆ ಕಾನ್ವೋಕೇಷನ್‌ಗೆ ಹೋಗಲು ಕರಿಯ ಕೋಟೇ ಆಗಬೇಕಂತೆ ಆದ್ದರಿಂದ, ದಯವಿಟ್ಟು ಒಂದು ದಿನ ಮಟ್ಟಿಗೆ ಆ ಕೋಟನ್ನು ಎರವು ಕೊಟ್ಟು ಉಪಕಾರ ಮಾಡಬೇಕು ಸ್ವಾಮಿ.ಇದೇ ನನ್ನ ಕೇಸು. ಹಲ್ಲು ಕಿರಿದ ಆ ಭಂಡ."

ಅತ್ಯಂತ ನಿರಾಸೆಯಿಂದ ಒಣಗುತ್ತಿದ್ದ ಗಂಟಲಿನಲ್ಲಿ ಸ್ವಲ್ಪ ಚೇತನವನ್ನು ಮೂಡಿಸಿಕೊಂಡು ನಾನು ಹೇಳಿದೆ.

"ಆಗಲಿ ಒಂದು ದಿನ ಮಟ್ಟಿಗೆ ತೆಗೆದುಕೊಂಡು ಹೋಗುವಿರಂತೆ ಒಂದು ದಿನಕ್ಕೆ ಬಾಡಿಗೆ ಎರಡು ರೂಪಾಯಿ."

"ಎರಡು ರೂಪಾಯಿ! ಇದೇನು ಸ್ವಾಮಿ? ಏನೋ ಸ್ನೇಹಿತರು, ಒಂದು ದಿನ ಸಹಾಯ ಮಾಡುತ್ತೀರಿ ಅಂತ ಕೇಳಿದರೆ ಬಾಡಿಗೆ ಕೇಳುತ್ತೀರಿ?" ಎಂದರು.

"ಹೌದರೀ. ಕಾನ್ವೊಕೇಷನ್ ಟೈಮ್ ಕಣ್ರಿ ಡಿಮ್ಯಾಂಡ್ ಇರುತ್ತೆ. ಏನು ಮಾಡುವುದು ಹೇಳಿ" ಎಂದೆ ನಾನು ಸ್ವಲ್ಪ ಗಡುಸಾಗಿ.

"ಸರಿ, ಬರ್ತೀನಿ ಸಾರ್ ಇನೆಲ್ಲಾದರೂ ಜೊತೆ ಮಾಡ್ತೀನಿ ತುಂಬ ತೊಂದರೆ ಆಯಿತು" ಎಂದು ಹೇಳಿ ಎದ್ದು ಹೊರಟೇ ಬಿಟ್ಟ ಭೂಪ.

—ಶಿ. ಸುಬ್ಬ



"ಅಲ್ರಿ, ಅದೇ ಟೈ ಬೇಕಾಗಿದ್ರೆ ಪೇಟೆಗೆ ಹೋಗಿ ಈ ವೇಳೆಗೆ ತರಬಹುದಿತ್ತು."

ಲ್ಯೂನಿಕ್—ಲ್ಯೂನಿಟಿಕ್ !

ನಿಕಿಟ ಕೃಶ್ಚೇವ್ ಹಾಲಿವುಡ್‌ನಲ್ಲಿ "ನಿಕಿನಿಕಿ" ನೃತ್ಯವನ್ನು ನೋಡಿ ಕಣ್ಣುಮುಚ್ಚಿಕೊಂಡು "ಮಾರ್ಕ್ಸ್, ಮಾರ್ಕ್ಸ್" ಎಂದು ಕೆನ್ನೆಗೆ ಹೊಡದುಕೊಂಡರಂತೆ! ಏನದು ಆ ನಿಕಿನಿಕಿ ನೃತ್ಯ ? ನಿಕಿಟ ಮಾಧ್ವರಂತೆ 'ಶಾಂತಂಪಾಪಂ' ಎಂದು ಕೆನ್ನೆಗೆ ಕೆಂಪು ಸಂಪ್ರದಾಯದಲ್ಲಿ ಹೊಡದುಕೊಂಡಿದ್ದೇಕೆ? ಸುತ್ತಿಗೆ ಕೋಡು ಗೋಲಿಗೂ ಉಡುಪಿಗೂ ಏನು ಸಂಬಂಧ ?

ಲ್ಯೂನಿಕ್ ಚಂದ್ರಲೋಕಕ್ಕೆ ಭೂಲೋಕದ ರಾಯಭಾರಿಯಂತೆ ಹೋದಾಗ ನಿಕಿಟ ಅಮೇರಿಕಾಕ್ಕೆ ಹೋದಾಗ ...ಅಮೇರಿಕಾದಲ್ಲಿ ಕೃಷ್ಚೇವ್ ಮುಖದ ಮೇಲಿದ್ದ ಕಳೆ ಐಕ್ ಮುಖದ ಮೇಲಿರಲಿಲ್ಲ. ಕೃಷ್ಚೇವ್ ಮುಖದ ಮೇಲಿಲ್ಲದ ಮಂದಹಾಸ ಉಡುಪಿ ನಾರ್ಣಾಚಾರ‍್ರರ ಮುಖದಮೇಲೆ ಏಕೆ ಮಿಂಚುತ್ತಿತ್ತು. ಪಬ್ಲಿಕ್ ಒಪಿನಿಯನ್‌ಮೇಲೆ ಭಾಷಣ ಬಿಗಿಯುತ್ತೀರಲ್ಲ? ಇದಕ್ಕೆ ಏನುಕಾರಣ ಎಂಬುದನ್ನು ಹುಡುಕಿದ್ದೀರ? ಇಲ್ಲ! ಭಾರತದ ಡೆಮಾಕ್ರಸಿಯಲ್ಲೂ ಸಭ್ಯ ನಾಗರೀಕನಂತೆ ಬದುಕಿರುವ ನಾನು ಹುಡುಕಿ ಶೇಖರಿಸಿದ್ದೇನೆ.

ಲ್ಯೂನಿಕ್ ಚಂದ್ರಗ್ರಹಕ್ಕೆ ಇನ್ನೇನು ಮಾಡಿಸುವುದು ಎನ್ನುವಾಗ U.S.S.R.ನ ಪ್ಲೇನಿಟೋರಿಯಂನಲ್ಲಿ ವರ್ಣಿಸಲಸದಳವಾದ compli-cationsಉ. ಅಣುಮಯ ವಿಜ್ಞಾನಮ ಯ! ಖಗೋಳವಿಜ್ಞಾನಿಗಳು ದೂರದರ್ಶಕಗಳಲ್ಲಿನಿಟ್ಟ ಕಣ್ಣುಗಳನ್ನು ಮುಚ್ಚಿರಲಿಲ್ಲ! ಗ್ರಹ ಚಿತ್ರಣಕಾರರು ಚಂದ್ರನ ಛಾಯಾ ಚಿತ್ರಗಳನ್ನು ತೆಗೆಯುವ ಸಾಹಸದಲ್ಲಿ ತೊಡಗಿದ್ದಾರೆ! ರೇಡಿಯೋ ಯಂತ್ರೋಪಕರಣಗಳು ಉಪಗ್ರಹದ ಸಮಾಚಾರಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತಿದೆ. ಮುಂದೇನು ಎನ್ನುವ ಕಾತುರ! ಶೂನ್ಯಮೌನ! ಕರ್ತಾರನ ಕಮ್ಮಟವನ್ನು ಛೇದಿಸುವ ಅಣುಮಾನ! ಭೂಮಿ ತನ್ನ ಅಕ್ಷದ ಸುತ್ತ ಸುತ್ತುತ್ತಲೇ ಇದೆ! ದಕ್ಷಿಣ ಧೃವದಲ್ಲಿ ಅಸ್ತಮಿಸಿದ ಸೂರ್ಯ ಇನ್ನೂ ಹುಟ್ಟಿಲ್ಲ! ರಷ್ಯ, ಭಾರತಗಳಿಗೆ ಮಾತ್ರ ಅಂದು ಚಂದ್ರ ದರ್ಶನ! ಅಮೇರಿಕದಲ್ಲೋ ಕತ್ತಲೋ ಕತ್ತಲು! ಲ್ಯೂನಿಕ್ ಚಂದ್ರ ಗ್ರಹಕ್ಕೆ ಢಿಕ್ಕಿಹೊಡಿಸಿತು! ಸುತ್ತಿಗೆ ಕುಡುಗೋಲು ಬ್ಯಾಲೆನಾಟ್ಯ

ಭಂಗಿಯಲ್ಲಿತ್ತು! ಚಂದ್ರ ಲೋಕದ ಸಾರ್ವಭೌಮಾಧಿಕಾರತ್ವ ತನ್ನದೇ ಎನ್ನುವ ಗುಂಗಿನಲ್ಲಿ! ಆದರೆ? ಏನಾಯಿತು ಅರ್ಧ ಸೆಕೆಂಡಿನಲ್ಲಿ....ಪತ್ರಿಕೆಯಲ್ಲಿ ಬಂದಿದ್ದ ಚಂದ್ರನ ಚಿತ್ರ ಚೆನ್ನಾಗಿನೋಡಿ....ಗುರ್ತಿಸಿ? ಒಂದು ಭಾರಿ ಸೌಟು, ತಿರಳ್ ಗನ್ನಡದ ಸೌಟು! ಉಡುಪಿಯ ಸೌಟು!—ಅಡ್ಡಬಂದು ಸುತ್ತಿಗೆ ಕುಡುಗೋಲಿನ ಮಧ್ಯೆ ಇಂದು ನಿಂತಿರುವುದನ್ನು! ಪ್ರಧಾನ ಉಪಗ್ರಹ ವಿಜ್ಞಾನಿಗೆ ರಾಕೆಟ್ಟು ಗಳಿಗಿಂತಲೂ ತೀವ್ರವಾದ ಈ ನವೀನ ಅಸ್ತ್ರದ ಪರಿಚಯು ಇರಲಿಲ್ಲ! ಅವನಿಗೆ ಕುತೂಹಲ ಕೆರಳಿತು....ಹಿಂದುಗಡೆ ಬಾಲದಂತಹ ಉದ್ದನೆಯ ಕಾವು! ಮುಂದು ಕಡೆ ವರ್ತುಳಾ ಕಾರದ ಗೋಳ! ಖಗೋಳ ವಿಜ್ಞಾನಿ ದೇವಮಾನವನಂತೆ ನೋಡಿದ, ನಿಶ್ಚಿಂತೆಯಾಗಿ ನೋಡಿದ! ನೋಡಿಧನ್ಯನಾದ! ರಷ್ಯದ ವಿಜ್ಞಾನಿಗಳು ಈ ಗುಟ್ಟನ್ನು ತಿಳಿಸುತ್ತಾರೆಯೆ? ಆದರೆ ಸತ್ಯಕ್ಕೆ ಸಂಕೋಲೆ ಇಲ್ಲ! ಅದು ಎಂದಾದರೂ ಹೇಗಾದರೂ ಎಲ್ಲಾದರೂ ಚಿಮ್ಮೀ ಚಿಮ್ಮುತ್ತದೆ ಈ ಗುಟ್ಟು ರಷ್ಯದ ಉಕ್ಕಿನ ತೆರೆಯನ್ನು ಬೇಧಿಸಿಕೊಂಡು ಬರಲಿಲ್ಲ ಅಮೇರಿಕದ ಟೆಕ್ನಿಕಲರ್ ತೆರೆಯನ್ನು ಬೇಧಿಸಿಕೊಂಡು ಬಂತು! ಹೀಗೆ—

ಅಮೇರಿಕಾಕ್ಕೆ ಉಡುಪಿ ನಾರ್ಣಾಚಾರ್ರ ಅಳಿಯ ಗೃಹಕೈಗಾರಿಕಾ ನಿಯೋಗ ದಲ್ಲಿ ಸೊಂಡಿಗೆ ಕೈಗಾರಿಕೆಯ ಪ್ರತಿನಿಧಿಯಾಗಿ ಭೇಟಿ ಕೊಟ್ಟಿದ್ದಾನೆ. ಹಾಲಿವುಡ್ಡಿನ ನಟನಟಿಯರಿಗೆ ಮೂರು ಮೂರು ಪ್ಲೇಟು ಸೊಂಡಿಗೆ ತಿನ್ನಿಸಿ ಅವರು ತಿಂದಾಗ ಮಾಡಿದ ನೃತ್ಯಗಳನ್ನು ಚಿತ್ರೀಕರಿಸಿ ಪ್ರದರ್ಶಿಸಿದಾಗ ಮೊದಲಿಗಿಂತಲೂ ಹೆಚ್ಚು ಲಾಭ ಬಂತಂತೆ! ಅಳಿಯ ಈ ತಿನಸಿಗೆ " ನಿಕಿನಿಕಿ ಸೊಂಡಿಗೇಪ್ಸ್ " ಎಂದು ಲೇಬಲ್ಲಿಸಿ ನಯಾಗರದ ಸುತ್ತಲೂ ಆಧುನಿಕ ರೀತಿಯಲ್ಲಿ ಪ್ರಚಾರ ಮಾಡಿದನಂತೆ! ಲಕ್ಷ ಲಕ್ಷ ಗಟ್ಟಲೆ ಸರಬರಾಜು ಮಾಡಲು ಹಾಲಿವುಡ್ಡಿನ ಚಲನ ಚಿತ್ರ ಸಂಸ್ಥೆಗಳೆಲ್ಲಾ ಕೇಳಿದವು. ಅಳಿಯ ಮಾವನಿಗೆ ರೇಡಿಯೋ ಸಮಾಚಾರ ಕಳಿಸಿ ವಿಮಾನದಲ್ಲಿ ಸೊಂಡಿಗೆಗಳನ್ನು ತರೆಸಿಕೊಳ್ಳಲು ತೊಡಗಿದ: ನಾರ್ಣಾಚಾರ್ರಿಗೆ ಡಾಲರುಗಳ ಮೇಲೆ ಡಾಲರುಗಳ ಸಂಪಾದನೆ! ಅಂದ ಮೇಲೆ ನಾರ್ಣಾಚಾರ್ರು ನಕ್ಕಾಗ, ಕೆನ್ನೆ ಗುಳಿಬಿದ್ದು, ಕಿವಿಯಲ್ಲಿದ್ದ ವಜ್ರದ ಹತ್ತಕಡುಕು ಮಿಂಚಿದ್ದು ಏನು ಸೋಜಿಗ? ಇತ್ತ ಅಮೆರಿಕಾ ದಲ್ಲಿ, ಲ್ಯೂನಿಕ್ ಚಂದ್ರನಿಗೆ ಗೃಹವನ್ನು ಮುಟ್ಟಿದ ಮೂರನೆ ದಿನ ನಡೆದ ಅಂತರ ರಾಷ್ಟ್ರೀಯ ಖಗೋಳ ವಿಜ್ಞಾನಿಗಳ ಸಮ್ಮೇಳನದಲ್ಲಿ ನಾರ್ಣಾಚಾರ್ರ ಅಳಿಯ ಪ್ರತಿ ಯೊಬ್ಬ ಗೃಹವಿಜ್ಞಾನಿಗೂ ಮೂರು ಮೂರು ಸೊಂಡಿಗೆಯನ್ನು ರಂಗಿನ ತಟ್ಟೆಯಲ್ಲಿ ಕೊಟ್ಟು ಸತ್ಕಾರ ಮಾಡಿದನಂತೆ. ರಷ್ಯದ ಖಗೋಳ ವಿಜ್ಞಾನಿ ಸೊಂಡಿಗೆಗಳನ್ನು ಚಪ್ಪರಿಸುತ್ತಾ ಚಂದ್ರಲೋಕಕ್ಕೇ ಏರಿದನಂತೆ! ಅರ್ದಂಬರ್ಧ ಎಚ್ಚರವಂತೆ! ನಿಮ್ಮ ಊರು ಯಾವುದು ಎಂದು ಕೇಳಿದರಂತೆ. ನಾರ್ಣಾಚಾರ್ರ ಅಳಿಯ " ಉಡುಪಿ " ಎಂದ....ಖಗೋಳ ವಿಜ್ಞಾನ ದೊಪ್ಪನೆ ನೆಲಕ್ಕೆ ಬಿದ್ದ. ಕನವರಿಸಿಕೊಂಡ...........

"I saw in moon........when Lunic crashed ....a board.... ....with letters....... Udipi Brahmins coffee club." ಸೌತ್ ಕೆನರಾ ಅಳಿಯನ ಕಿವಿಗೆ ಮಾತ್ರ ಇದು ಕೇಳಿಸಿದ್ದು! ಮತ್ತಾರಿಗೂ ಗೊತ್ತಿಲ್ಲ! ಮರು ನಿಮಿಷದಲ್ಲಿಯೇ ವಿಜ್ಞಾನಿ ಚೇತರಿಸಿಕೊಂಡು ಇನ್ನಷ್ಟು ಸೊಂಡಿಗೆ ತಿಂದು ವಿಮಾನದಲ್ಲಿ ಕೂತು ರಷ್ಯಾಕ್ಕೆ ಹೊರಟೇಬಿಟ್ಟ! ವಿಮಾನ ನಿಲ್ದಾಣದಲ್ಲಿ ಹೆಂಡತಿಗೆ ಹೇಳಿದನಂತೆ, ನಮ್ಮ ಅಳಿಯನ ಕಡೆ ಬೆಟ್ಟು ತೋರಿಸಿ—"See there, lunitic! lunitic! ಎಂದು! ಭಾವಸಮಾಧಿಗೆ ಏರಿದ್ದ ವಿಜ್ಞಾನಿಯ ಇಂಗಿತ ಏನು ಎಂಬುದುಗೊತ್ತಾಯಿತೆ? ಲ್ಯೂನಿಕ್ ಚಂದ್ರಗ್ರಹವನ್ನು ತಲುಪುವ ಮುನ್ನವೇ ಅಲ್ಲಿಗೆ ತಲುಪಿ ಮೂಲ ನಿವಾಸಿಯಾಗಿರುವ, ಮಾನವನನ್ನು ಅತ್ಯಂತ ಅಭಿಮಾನ ದಿಂದ ಈ ವಿಜ್ಞಾನಿ 'lunitic' ಎಂದು ಗೌರವ ನೀಡಿದ್ದಾನೆ!

ರಷ್ಯದ ಸ್ಪುಟ್ನಿಕ್—ಲ್ಯೂನಿಕ್‌ಗಳ ಬಗ್ಗೆ ನಾವು ಯಾವ ಕೌತಕವನ್ನೂ ಆತಂಕವನ್ನೂ ವ್ಯಕ್ತಪಡಿಸದೆ ಇರುವುದು ವಿಶೇಷವೇನೂ ಇಲ್ಲ. ನಮ್ಮ ವೈಜ್ಞಾನಿಕ ಪ್ರಗತಿಯ ಮುಂದೆ ಅವು ಏನು ಮಹಾ! ಆದರೆ ನಮ್ಮ ದೇಶದ ತಿನಸೊಂದನ್ನು ಅಮೇರಿಕನ್ನರಿಗೆ ತಿನ್ನಿಸಿ ನಾವು ಡಾಲರ್‌ಗಳನ್ನು ಸಂಪಾದನೆ ಮಾಡಿದ್ದಲ್ಲದೆ, ಅವನ್ನು ತಿಂದು ತೆಪ್ಪಗಿರಲಾರದ ಅಮೇರಿಕನ್ನರು "ನಿಕಿನಿಕಿ" ನೃತ್ಯ ಮಾಡಿ ನಿಕಿಟ ಬಾಯಿಂದ ಥೂ ಅಶ್ಲೀಲ' ಎಂದು ಛೀಮಾರಿ ಹಾಕಿಸಕೊಳ್ಳಬೇಕಾಯಿತಲ್ಲ! ಈ ಗುಟ್ಟು ಹೊರಬಿದ್ದು ನಾಳೆ ಅಮೆರಿಕಾ ಭಾರತದ ಮೇಲೆ ವಿಶ್ವಸಂಸ್ಥೆಗೆ ದೂರು ಕೊಟ್ಟರೆ................?

ಏನಂತೆ! ಒಂದು ಪೌಂಡ್ ಸೊಂಡಿಗೆ ½ ಗ್ರೋಸ್ ಹುರುಳಿ ಹಪ್ಪಳಗಳ ಸಮೇತ ಕೃಷ್ಣಮೆನನ್ ಭಾರತದ ಪರ ವಾದ ಮಾಡಲು ಹೊರಟರೆ—ಮುಗಿಯಿತು ಡ್ಯಾಗ್ ಹ್ಯಾಮರ್‌ಷೀಲ್ಡ್ ಗತಿ!

ಅಂದ ಹಾಗೆ 'ಲ್ಯೂನಿಟಿಕ್' ಯಾರು? ಹೇಳಬೇಕೇನು?

ಹಾ. ರಾ.

ಬರುವ ಜನವರಿ ಹೊತ್ತಿಗೆ ಬೇಕಾಗಬಹುದಾದ ಲಕ್ಷ ಲಕ್ಷ ಖದ್ದರ್ ಟೋಪಿ ಗಳನ್ನು ಸರಬರಾಜು ಮಾಡಲೋಸುಗ ವ್ಯಾಪಾರಸ್ಥರೊಬ್ಬರು ಜಪಾನಿಗೆ ಹೋಗಿದ್ದಾ ರೆಂಬುದು ಖಚಿತವಲ್ಲವಂತೆ.

* * * *

ಸುಬ್ಬಮ್ಮನ ಉಪ್ವಾಸ

ಆಚೆ ಮನೆ ಸುಬ್ಬಮ್ಮಂಗೆ
ಇವತ್ತು ಏಕಾದ್ಶಿ–ಉಪ್ವಾಸ
ಎಲ್ಲೋ ಸ್ವಲ್ಪ ತಿಂತಾರ್ ಅಷ್ಟೆ
ಉಪ್ಪಿಟ್ಟು-ಅವ್ಲಕ್ಕಿ–ಪಾಯ್ಸ.

ಮೂರೋ, ನಾಕೋ ಬಾಳೇ ಹಣ್ಣು
ಸ್ವಲ್ಪ ಚಕ್ಕಲಿ–ಕೋಡ್ಬಳೆ
ಗಂಟೆಗೆರಡು ಸೀಬೇಹಣ್ಣು
ಆಗಾಗ ಒಂದೊಂದ್ ಕಿತ್ತಳೆ

ಮಧ್ಯಾಹ್ನ್ವೆಲ್ಲಾ ರವೇ ಉಂಡೆ
ಹುರ್ಳೀಕಾಳಿನ ಉಸ್ಲಿ
ಒಂದೊಂದ್ಸಲ ಬಿಸಿ ಸಂಡ್ಗೆ
ಒಂದೋ ಎರಡೋ ಇಡ್ಲಿ

ರಾತ್ರಿ ಪಾಪ ಉಪ್ಪಿಟ್ಟೇನೆ
ಒಂದ್ಲೋಟದ ತುಂಬ ಹಾಲು
ಪಕ್ಕದ ಮನೆ ರಾಮೇಗೌಡರ
ಸೀಮೇ ಹಸು ಹಾಲು

ಆಚೇಮನೆ ಸುಬ್ಬಮ್ಮಂಗೆ
ಇವತ್ತು ಏಕಾದ್ಶಿ–ಉಪ್ವಾಸ
ಎಲ್ಲೋ ಸ್ವಲ್ಪ ತಿಂತಾರ್ ಅಷ್ಟೆ
ಉಪ್ಪಿಟ್ಟು–ಅವ್ಲಕ್ಕಿ–ಪಾಯ್ಸ.

—"ಸತ್ಯ"

ಗೊದ್ದಯ್ಯನ ಪ್ರೇಮರಾಹು

ಮುಗಿಲು ಹಳ್ಳಿ,
೨೦-೯-೪೯.

೧

ಪ್ರಿಯಮಿತ್ರ ಅರಾಸೇ,

ಈದಿನ ಮಧ್ಯಾಹ್ನ ಅ.ಕ.ವಿ. ಪ್ರೇ. ಪದ ಅಧ್ಯಕ್ಷರು ಸಿಕ್ಕಿದರು. ನಿಮ್ಮನ್ನು ಕಾಣದೆ ಅವರ ಹಂಬಲಿಸುತ್ತಿದ್ದಾರೆ. ಜೀವನದ ದುಃಖ ಸಂಕಟಗಳಿಗೂ, ಮನುಷ್ಯನ ದುರ್ಬುದ್ಧಿಗೂ, ಭಗವಂತನ ನಿಷ್ಕರುಣೆಗೂ, ಚೀಣಾದೇಶಕ್ಕೂ, ಪ್ರೇಮಕ್ಕೂ ಎಲ್ಲಿ ಯಿಲ್ಲವೆಂದು ಅವರು ಸಿದ್ಧಾಂತ ಮಾಡಿದ್ದಾರೆ. ಆದುದರಿಂದ ಎಲ್ಲಕ್ಕೂ ಎಲ್ಲಿಯಿದೆ ಯೆಂಬ ಕಂತಿಳುವಳಿಕೆಯಿಂದ ಅ.ಕ.ವಿ. ಪ್ರೇ. ಪದ ಇತಿಹಾಸವನ್ನು ಕೊನೆಗೊಳಿ ಸಿದ್ದಕ್ಕಾಗಿ ನಿಮ್ಮ ಮೇಲೆ ಅವರು ಭಾರೀ ರೇಗಿದ್ದಾರೆ. ಅದಕ್ಕಾಗಿ ನಂಬಿಕೆದ್ರೋಹದ ಆಪಾದನೆ ಹೊರಿಸಿ ನಿಮ್ಮನ್ನೇಕೆ ಕೋರ್ಟಿಗೆಳೆಯಬಾರದು ಎಂದವರು ಪ್ರಶ್ನಿಸಿದರು. ನಿಮ್ಮಗ್ಯಾರೆ ಹಿಡಿದೆಳೆದು ನಡುಬೀದಿಯಲ್ಲಿ ಬಡಿದರೆ ಕೋರ್ಟ್‌ಫೀ ಉಳಿಯುತ್ತದೆ ಎಂಬ ಅಂಶವನ್ನು ನಾನು ಅವರ ಗಮನಕ್ಕೆ ತಂದೆ.

ಅವರೂ, ನಾನೂ, ರೇಗಿರುವುದಕ್ಕೆ ಗೊದ್ದಯ್ಯನ ಕಾಗದವೇ ಕಾರಣ. ಅದನ್ನವರಿಗೆ ಕೊಟ್ಟೆ. ನೀವಿಲ್ಲದೆ ಆ ಕಾಗದವನ್ನು ಕಣ್ಣೆತ್ತಿ ನೋಡುವುದೂ ಇಲ್ಲ ಎಂದರವರು. ಗೊದ್ದಯ್ಯನ ಸಮಸ್ಯೆ ಬಹು ಜರೂರು. ಅದರ ಪರಿಹಾರ ಸೂಚಿಸ ಲೆಂದು ಇದರ ಲಗ್ತು ಅವನ ಕಾಗದವನ್ನೂ ಕಳಿಸಿದ್ದೇನೆ.

ಬೇಗ ಉತ್ತರ ನೀಡಿ. ಇಲ್ಲದಿದ್ದರೆ ನನ್ನಾಣೆ, ನನ್ನ ಪರಮಗುರು ರಾಮಾನುಜರಾಣೆ.

ಇಂತು ತಮ್ಮ ದೇಹ ಭದ್ರತಾಭಿಲಾಷಿ,
ವಿಷ್ವಕ್ಸೇನ N. ಅಯ್ಯಂಗಾರ್.

‘ ಲವ್ ಫರ್ನೇಸ್ ’,
11, ಟೈಟ್ ಕಾರ್ನರ್ಸ್,
ಸರ್ರೇ,
21—9—1959.

ಅಖಿಲಕರ್ಣಾಟಕ ವಿಫಲಪ್ರೇಮಿಜನ ಪರಿಷತ್ತಿನ ಅಧ್ಯಕ್ಷರ ದಿವ್ಯಸನ್ನಿಧಿಗೆ, ಶಾಖೋಟಕೋಪಮ ಗೊದ್ದಯ್ಯನ ಅನಂತ ಶರಣಾರ್ತಿಗಳು.
ತಥಾಗತ,

I take my refuge in thy name and thee. ನಾನು ಫಜೀತಿ ಸ್ವರ್ಗದ ಪಾನಮತ್ತನಾದುದನ್ನು ಲಾಲಿಸು.

ಲಂಡನ್ನಿನ ಒಂದು ಆಲ್‌ನೈಟ್‌ಬಾರ್. ಗಂಟೆ ರಾತ್ರಿ ಹನ್ನೆರಡು. ಮೂಲೆ ಯೊಂದರಲ್ಲಿ ಕುಳಿತ ನಾನು ಗಿಳಾಸಿನಲ್ಲಿ ನಾಬಳ್ಳೆತ್ತರ ವಿಸ್ಕಿ ಸುರಿದು ಒಂದೇ ಗುಕ್ಕಿಗೆ ಗೊಳಕ್ಕೆಂದು ನುಂಗಿದೆ. ಕಣ್ಣುಮುಚ್ಚಿ ನಿಷಾತ್‌ಬಾಗ್ ನೋಡುತ್ತಿದ್ದೆ. ಎದೆಗೇನೋ ಅಟೆಯಿತು. ಕಣ್ಣು ತೆರೆದೆ. ನಮ್ಮ ಬೀದಿಯ ಪ್ರಸಿದ್ಧ ಗಾಂಗ್‌ಸ್ಟರ್ ರಮಣಿ ನ್ಯಾನ್ಸಿ ಬಟೆಂಟ್ ಟೆಫ್‌ಡಾಲ್ ನನ್ನೆದೆಗೆ ಪಿಸ್ತೂಲು ಹಿಡಿದು

“ Howdy Greg ? Hows jolly old love ? ” ಎನ್ನುತ್ತಿದ್ದಾಳೆ.

“ ನಾನು ಗ್ರೆಗ್ ಅಲ್ಲ, ಗೊದ್ದ ” ಎಂದೆ

“ ನನಗೆ ಗೊದ್ದನೇ ಬೇಕು ” ಎಂದಳು.

“ ನಾನು ಫಿಲಾಸಫಿ ಪ್ರೊಫೆಸರ್ ” ಎಂದೆ

“ ನಾನು ಫಿಲಾಸಫಿ ಸ್ಟೂಡೆಂಟ್ ” ಎಂದಳು.

ಮತ್ತೆ ಗಿಳಾಸಿಗೆ ನಾಬಳ್ಳೆತ್ತರ ವಿಸ್ಕಿ ಸುರಿದು ‘ For Nuts ’ ಎಂದು ಟೋಸ್ಟ್ ಹೇಳಿ ಕುಡಿದೆವು. ಅಬಲೆಯಾದ ಹೆಣ್ಣು ಎದೆಗೆ ಪಿಸ್ತೂಲು ಹಿಡಿದಾಗ ಒಪ್ಪುವುದೇ ಮೇಲು. ಒಪ್ಪಿಗೆ ಕೊಟ್ಟುಬಿಟ್ಟೆ. ಇನ್ನು ಮೂರು ವಾರಗಳಿಗೆ ನನ್ನ ಮದುವೆಯಾಗಲಿದೆ. ಇದು ನ್ಯಾನ್ಸಿಯ ಸ್ವಯಂವರ.

ಮಜಾ ಮಾಡು ! ಎಂದು ಹೊಟ್ಟೆಯಕಿಚ್ಚಿನಿಂದ ಹೇಳಬೇಡಿ. ವಿಲಾಯಿತಿ ಹುಡುಗಿಯನ್ನು ಮದುವೆಯಾಗುವುದು ಅದೃಷ್ಟವೇನೂ ಅಲ್ಲ. ನ್ಯಾನ್ಸಿಯ ಹೆಸರು

ಸ್ಕಾಟ್‌ಲೆಂಡ್‌ಯಾರ್ಡಿಗೆ ಅತಿಪರಿಚಿತ! ಅಲ್ಲದೆ ನನಗೂ ಮದುವೆ ಅಪರಿಚಿತವಲ್ಲ. ನನ್ನ ಒಬ್ಬ ಹೆಂಡತಿ, ಹಾಲೀ ಈಗ ಊರಿನಲ್ಲಿ, ನನ್ನನ್ನು ನುಂಗಲು ಬಾಯ್ತೆರೆದು ಸಿದ್ಧವಾಗಿ ನಿಂತಿದ್ದಾಳೆ. ಈ ಇಬ್ಬರೂ ಹಾಳಾಗಿ ಹೋಗಲಿ ನನ್ನ ಪ್ರಿಯತಮೆ? ಅಯ್ಯೋ!

ಕತೆಯನ್ನು ಕೊನೆಯಿಂದ ಆರಂಭಿಸಿದೆ. ಈಗ ಮೊದಲಿನಿಂದ ಹೇಳಿದರೆ ನನ್ನ ಸಂಕಟ ನಿಮಗೆ ತಿಳಿದೀತು. ಮಾಜೀ ಅಪರಾಧೀ ಬುಡಕಟ್ಟೊಂದರ ತಲೆಯಾಳು ಚೋಳಪ್ಪನ ಹೆಂಡತಿ ಚೋಳಮ್ಮನ ಗರ್ಭಸುಧಾಂಬುಧಿಯಲ್ಲಿ ರಾಕಾ ಸುಧಾಕರನಂತೆ ಜನಿಸಿದನೆಂದು, ನನ್ನ 32ನೆಯ ವಯಸ್ಸಿನಲ್ಲಿ ಬರೆದ ಜಾತಕ ತಿಳಿಸುತ್ತದೆ. ಗೊದನೆಂಬುದು ನನ್ನ ಅನ್ವರ್ಥ–ಅಂಕಿತನಾಮ.

ನನ್ನ ಬಾಲ್ಯದ ವಿಷಯ ಹೇಗೆ ಹೇಳಲಿ? ಅಡವಿಯ ಕಾಡುಕೋಣಗಳು ಹೇಗೆ ಬೆಳೆದುವೆಂದು ಯಾರಿಗೆ ಗೊತ್ತು? ಬೆಳೆದೆ. ಓದಿದೆ. ಕಾಲೇಜು ಸೇರಿದೆ. ಅಲ್ಲಿ ನಮ್ಮಾಳ್ವಾರರ (ಅವರ ಹೆಸರು ವಿಷ್ವಕ್ಸೇನ N. ಅಯಂಗಾರ್) ನನ್ನಲ್ಲಿ ಆಸಕ್ತಿ ವಹಿಸಿದರು. ಅವರು ಬರೆದುಕೊಟ್ಟ ಉತ್ತರಗಳಿಂದಲೂ, ಫಿಲಾಸಫಿ ಪ್ರೊಫೆಸರ ಹಾಲೀ ಅಪರಾಧದಿಂದಲೂ ಫಸ್ಟ್‌ಕ್ಲಾಸಿನಲ್ಲಿ ಎಮ್ಮೆಯಾದೆ. ಅದನ್ನು ಕೇಳಿ ನಮ್ಮಾಳ್ವಾರು The Race is not to the Swift nor battle to the strong! ಎಂದರು. ನಮ್ಮಾಳ್ವಾರರ ಅಪ್ಪಣೆಯಂತೆ ಅರ್ಜಿಗುಜರಾಯಿಸಿ ಲೆಕ್ಚರರ್ ಆದೆ. ಆಗ ನಮ್ಮಾಳ್ವಾರರು "ಗೊದ್ದಾ ಶಾಭಾಸ್, Nor yet bread unto the wise" ಎಂದರು.

ಭಾರತ ಸ್ವತಂತ್ರವಾಯಿತು. ಆಗ ನಮ್ಮ ವಿಶ್ವವಿದ್ಯಾಲಯದ ಜಾತ್ಯತೀತ ಬಡ್ತಿಗಳು ನಡೆದು, ನಾನು ನಮ್ಮಾಳ್ವಾರರ ಮೇಲೆ ಹಸೆಸುಂರಿ ಪ್ರೊಫೆಸರಾದೆ. ಹೇಗಿದೆ ನೋಡಿ ಪ್ರಜಾಪ್ರಭುತ್ವದ ಪವಾಡ? ಬ್ರಿಟಿಷರೇ ಇದ್ದಿದ್ದರೆ ನಾನು ಅಪರಾಧಿ ಬುಡಕಟ್ಟಿನಲ್ಲೇ ಇನ್ನೂ ಇರಬೇಕಾಗಿತ್ತು–ಜೈಲಿನಲ್ಲಿ. All is for the best in this best of all Possible words ಎಂದು ನಂಬಿಬಿಟ್ಟೆ.

ನಾನು ಹಸೇಸುಂಟಿಯಾದಾಗ ನನ್ನ 32 ವಸಂತಗಳೂ 33 ಶರದಗಳೂ ಕಳೆದಿದ್ದವು–ವ್ಯರ್ಥವಾಗಿ. ಮದುವೆಗಾಗಿ ಸ್ವಯಂವಧೂ ವಿಧಾನವನ್ನು ಅನುಸರಿಸಲು ನಿರ್ಧರಿಸಿ, ನಾಯಿಯಂತೆ ಅಲೆದೆ. ಹಾಗೆ ಅಲೆಯುತ್ತಾ ಪ್ರಾಣಿ ಸಂಗ್ರಹಾಲಯ ರಸ್ತೆಯಲ್ಲಿ ಅವಳನ್ನು ನೋಡಿದೆ. ಅವಳು ಹಾಸ್ಟಲ್ ಒಂದರೊಳಕ್ಕೆ ಮಾಯವಾದಳು.

ನೇರವಾಗಿ ನಮ್ಮಾಳ್ವಾರರ ಹತ್ತಿರ ಹೋದೆ. ನನ್ನ ಸ್ವಯಂವಧುವಿನ ವಿಷಯ ಪ್ರಸ್ತಾಪಿಸಿದೆ. ಅವರು ಎರಡು ದಿನ ಏನೂ ಹೇಳಲಿಲ್ಲ. ಮೂರನೆ ದಿನ "ಗೊದ್ದಣ್ಣ,

ಅವಳ ಹೆಸರು ಸಿದ್ದಿ. ಅವಳು ನಿಮ್ಮ ಜಾತಿಯವಳೇ. ಆದರೆ ಕಿರಿಸ್ತಾನ ಜಾತಿಗೆ ಮತಾಂತರವಾಗಿದ್ದಾಳೆ. ಅವಳನ್ನು ಅನೇಕ ಮದರುಗಳು ಜತನವಾಗಿಟ್ಟಿದ್ದಾರೆ. ಬಯಸಿದಷ್ಟು ಸುಲಭವಲ್ಲ" ಎಂದರು. ನಾನು "ಆಳ್ವಾರ್ರೇ, ಹಸೇಸುಂಠಿ ಪ್ರೊಫೆಸರ್ ಆಗುವುದಕ್ಕಿಂತ ಅದು ಕಷ್ಟವೇ ?" ಎಂದು ಸವಾಲು ಹಾಕಿದೆ.

"ಗುಂಡಿಗೆ ಬಿದ್ದೀ ಹುಷಾರ್" ಎಂದು ಅವರು ಎಚ್ಚರಿಸಿದರು.

ಮರುದಿನ ಪ್ರಾಣಿ ಶಾಲೆ ರಸ್ತೆಯ ಕಿರಿಸ್ತಾನ ಹಾಸ್ಟಲಿಗೆ ಹೋಗಿ ವಾರ್ಡನ್ನಿಗೆ ಕಾಗದ ಕಳಿಸಿದೆ. ಕರೆ ಬಂದ ಮೇಲೆ ಒಳಗೆ ಹೋಗಿ ಫಾದರು ಮದರುಗಳ ನಡುವೆ ವಿರಾಜಮಾನರಾಗಿ ಕುಳಿತ ವಾರ್ಡನ್ ಎಲಿಜಬೆತ್ತಮ್ಮನವರ ಪರಿಚಯ ಮಾಡಿಕೊಂಡೆ. ಏಕೆ ಬಂದಿರಿ ಎಂದವರು ಕೇಳಲು "I love........" ಎಂದಿಷ್ಟೇ ಹೇಳಿದೆ, ಸಿದ್ದಿಯ ಹೆಸರು ಗಂಟಲೊಳಗೆ ಉಳಿಯಿತು. ಎಲಿಜಬೆತ್ತಮ್ಮನವರು ನಾಚಿ ತಲೆ ತಗ್ಗಿಸಿದರು. "ಮದುವೆಯಾಗಬೇಕು......." ಎಂದೆ. ಯಾರನ್ನು ಮುಂದೇನೂ ತಿಳಿಸಲಿಲ್ಲ. ಸಾಕ್ಷಿಗಳೆಲ್ಲರೂ ನನ್ನನ್ನು ಆನಂತರ ಪುಸಲಾಯಿಸಿದ್ದರಿಂದ (ಒದ್ದರು ಎನ್ನಿ) ಸೈಂಟ್ ತೋಮಾಸರ ಚರ್ಚಿನಲ್ಲಿ ಮುಂದಿನ ಮಂಗಳವಾರ ಎಲಿಜಬೆತ್ತಮ್ಮ (ಈಗ ಎಲಿಜಬೆತ್) ಮತ್ತು ನನ್ನ ವಿವಾಹ ನೆರವೇರಿಬಿಟ್ಟಿತು. ನಮ್ಮಾಳ್ವಾರರೇ ನನ್ನ ಬೆಸ್ಟ್‌ಮ್ಯಾನ್.

"ಗೊಡ್ಡಾ, ಕುಲಗೆಟ್ಟರೂ ಸುಖವಿಲ್ಲ. ನಿನ್ನ ವಯಸ್ಸು 32. ನಿನ್ನ ಪತ್ನಿಗೆ ನಲವತ್ತು." ಎಂದು ಆಳ್ವಾರರು ಟೀಕಿಸಿದರು. ಅವರು ಬರೀ 'ಸುಖವಿಲ್ಲ' ಎಂದುದು ತಪ್ಪು. ಎಲಿಜಬೆತ್ ಮಾನವಿಯಲ್ಲ ರಕ್ಕಸಿ. ತಾಟಕಿ ಎಂದೇ ಅವಳಿಗೆ ಹೆಸರಿಟ್ಟಿದ್ದರೆ ಚೆನ್ನಾಗಿತ್ತು. ನನ್ನ ಸುಖವೂ ಹೋಯಿತು, ಮಾನವೂ ಹೋಯಿತು. ಕಾಲೇಜಿಗೆ ಹೋದಾಗ ಕೆನ್ನೆಮೇಲೆ ಬಾಚಾಳ ಮೂಡಿದ್ದರೆ, ಕಣ್ಣು ಊದಿದ್ದರೆ 'ಏಕೆ ಹೀಗಾಯಿತು' ಎಂದು ಕೇಳುವವರಿಗೆ ಏನು ಹೇಳಬೇಕು. ಮೂವತ್ತ ಮೂರನೇ ವಸಂತವೂ ವ್ಯರ್ಥ. ಬಾಳೂ ವ್ಯರ್ಥ. ಸಿದ್ದಿಯಿಲ್ಲದೆ ಹೋದ ಗಾಯದ ಮೇಲೆ ಎಲಿಜಬೆತ್ತಿನ ಬರೆ! ವಿವಾಹ ವಿಚ್ಛೇದನೆಯನ್ನೇಕೆ ಪಡೆಯಬಾರದು ಎಂದು ಕೇಳಿರಿ. ಬಂದ ಹಣದಲ್ಲರ್ಧ ಅವಳ ಜೀವನಾಂಶಕ್ಕೆ ಹೋದರೆ ನನ್ನ ಗತಿ ?

ನೀನು ಫಿಲಾಸಫಿ ಪ್ರೊಫೆಸರು ಸಮಾಧಾನ ತಂದುಕೋ ಎಂದೀರಿ. ನಮ್ಮಾಳ್ವಾರರು ಬರೆಕೊಟ್ಟದ್ದನ್ನು ಹೋಲ್‌ಸೇಲ್ ಕಾಪಿ ಹೊಡೆದು, ನಮ್ಮ ಪ್ರೊಫೆಸರನ್ನು "He is the ghost of Bergson" ಎಂದು ಹೊಗಳಿ ಪಾಸಾದ ನನಗೆ ಫಿಲಾಸಫಿ ಎಲ್ಲಿಯದು ? Ghost ಎನ್ನಬಾರದಿತ್ತು living spirit ಎನ್ನಬೇಕಾಗಿತ್ತು ಎಂದು ನಮ್ಮಾಳ್ವಾರರು ನಕ್ಕರು. ಆದರೇನು, ನಾನು ಫಸ್ಟ್ ಕ್ಲಾಸಿನಲ್ಲಿ ಪಾಸಾದೆನಲ್ಲ! ಕೆಲವು ಜಾತಿಯ ಹೆಣ್ಣು ಜೇಡಗಳು, ತಮ್ಮನ್ನು ಪ್ರೀತಿಸಲು

ಬಂದ ಗಂಡು ಜೇಡುಗಳನ್ನು ನುಂಗಿ ಬಿಡುತ್ತವಂತೆ. ಅಂತಹ ಗಂಡುಜೇಡವೊಂದು ಫಿಲಾಸಫಿ ಪ್ರೊಫೆಸರಾಗಿದ್ದರೆ ನಿಶ್ಚಿಂತೆಯಿಂದ ಸುಮ್ಮನಿರುತ್ತೆಂದು ನಿಮ್ಮ ಅಭಿಪ್ರಾಯವೇ?

ಮತ್ತೆ ನಮ್ಮಾಳ್ವಾರರ ಕಾಲು ಕಟ್ಟಿಕೊಂಡು ನನ್ನ ಸಂಕಟ ಹೇಳಿ ಗೋಳೋ ಎಂದು ಅತ್ತೆ. ಅವರು 'ಗೊದ್ದಾ ಇದಕ್ಕಿರುವುದು ಒಂದೇ ಮಾರ್ಗ. ಯಾವುದ್ಯಾದರೂ ಸ್ಕಾಲರ್‌ಷಿಪ್ ಹೊಡೆದು ಪರದೇಶಕ್ಕೆ ಹೋಗು. ನಿಮ್ಮಂಥ ಜನಕ್ಕೆ Ph. D. ಕೊಡಲು ಪರದೇಶಗಳು ಹಾತೊರೆಯುತ್ತಿವೆ. ಅಲ್ಲಿಗೆ ಹೋದಮೇಲೆ ಆದುದಾಗಲಿ" ಎಂದರು.

ನಿಜ ನಮ್ಮಂಥವರಿಗೆ ಪರದೇಶಕ್ಕೆ ಹೋಗುವುದು ಬಲು ಸುಲಭ. ಕರೆದು ಸ್ಕಾಲರ್‌ಷಿಪ್ ಕೊಟ್ಟು ಕಳಿಸಿದರು. ಲಂಡನ್ನಿಗೆ ಬಂದೆ. ಮೊದಲ ವರ್ಷ ಹೆಂಡತಿಗೆ ಹೆದರಿ ಓದಲಿಲ್ಲ. ಎರಡನೇ ವರ್ಷ ಓದಿದರೂ Ph. D. ಸಿಕ್ಕಲಿಲ್ಲ. ಈ ವರ್ಷ ಡಾಕ್ಟರೇಟಿಗೆ ಚಿಂತೆಯಿಲ್ಲ. ನಮ್ಮಾಳ್ವಾರರು ಥೀಸಿಸ್ ಬರೆದು ಕಳಿಸುತ್ತಾರೆ ನನಗೆ Ph. D. ಸಿಗುತ್ತದೆ. ಜೊತೆಗೆ ಸ್ವದೇಶವಾಸ! ತಾಟಕಿಯ ಸಂಗ!! ಇದನ್ನು ಚಿಂತಿಸುತ್ತಾ ಕುಳಿತಾಗಲೇ ನ್ಯಾನ್ಸಿ ನನ್ನನ್ನು ಬಲಿಗೆಳೆದದ್ದು.

ನನ್ನ ಥೀಸಿಸ್ ಹೆಸರು ನೆನೆಸಿಕೊಂಡರೆ ನಗು ಬರುತ್ತದೆ. Whither contemporary Morals?—Some burning Problems. ನಾನು Whither Godda? ಎಂದೇ ಥೀಸಿಸ್ ಬರೆಯಬೇಕಾಗಿತ್ತು. ನನ್ನ ಸಮಸ್ಯೆಯನ್ನು ನನ್ನ ಇಲ್ಲಿಯ ಸ್ನೇಹಿತನೊಬ್ಬನಲ್ಲಿ ಪ್ರಸ್ತಾಪಿಸಿದಾಗ ಅವನು "ಗೊದ್ದಣ್ಣ" ನೀನು ಅಟ್ಲಾಂಟಿಕ್ ಸಾಗರದಮೇಲೆ ಸಸ್ಪೆನ್ಷನ್ ಬ್ರಿಡ್ಜಿನಹಾಗಿರುವೆ. ಪ್ರೇಮವೇ ನಿನ್ನ ಭಾರವನ್ನು ಹೊತ್ತ ಲೋಹದ ತಂತಿ. ನ್ಯಾನ್ಸಿ, ಎಲಿಜಬೆತ್ತರೇ ಪಿಲ್ಲರುಗಳು ಎಂದು ನಕ್ಕ, ನನಗೆ ತಿಳಿಯಲಿಲ್ಲ.

ನನ್ನ ಗತಿಯೇನು? ನಮ್ಮಾಳ್ವಾರರು "ನನಗೇನೂ ತೋಚುತ್ತಿಲ್ಲ" ಎಂದು ಬರೆದಿದ್ದಾರೆ. ನಡುನೀರಿನಲ್ಲಿ ಕೈ ಬಿಟ್ಟಿದ್ದಾರೆ. ನಿನ್ನ ವಿಳಾಸ ಕೊಟ್ಟು ತಥಾಗತನಿಂದ ನಿನ್ನ ದುಃಖ ಶಮನ ಮಾರ್ಗ, ದೊರೆತೀತು ಎಂದು ಸೂಚಿಸಿದ್ದಾರೆ. ಇದ್ದ ಸುದ್ದಿ ಇದ್ದ ಹಾಗೆ ಅರಿಕೆ ಮಾಡಿಕೊಂಡಿದ್ದೇನೆ.

ಭನ್ತೆ,

I take refuge in thy order.

ಇಂತು ದಾರ್ಶನಿಕಾಧಮ

ಗೊದ್ದ.

ಹಿಂದಿನಿಂದ: ನನ್ನ ಸ್ವವಿಷಯವಾಗಿ ಬರೆದ ಪದ್ಯವೊಂದನ್ನು ಲಗ್ತಿಸಿ ಕಳಿಸಿದ್ದೇನೆ.

ಇಂತು

ಗೊದ್ದ.

ಮಧುನಗರ,
೧೦—೧೦—೫೯.

ತಥಾಗತ,

. ದೇಹ ಸೌಖ್ಯವೇ? ಮನಸ್ಸು ನಿರ್ಮಲಿನವೇ? ಮೊದಲನೆಯದಾಗಿ ಓದುಗರ ಸಹನೆ, ಸಂಪಾದಕರ ತಾಳ್ಮೆಗಳಿಗೆ ಎಲ್ಲೆಯಿದೆಯೆಂಬ ಅಂಶವನ್ನು ನಿನ್ನ ಗಮನಕ್ಕೆ ತರಲಿಚ್ಛಿಸುತ್ತೇನೆ. ಎರಡನೆಯದಾಗಿ, ನಾನೇನೂ ನಿನ್ನ ಅ. ಕ. ವಿ. ಪ್ರೇಮದ ಟೆಕ್ನಿಕಲ್ ಎಕ್ಸ್‌ಪರ್ಟ್ ಅಲ್ಲ; ನಿನ್ನ ಮಿತ್ರವಿರಹ ಶ್ಲಾಘನೀಯವಾದರೂ ಹಬ್ಬದ ಹೋಳಿಗೆ ಪೂಜೆಯ ನಡುವೆ ಅಕವಿಪ್ರೇಮದ ಸಮಸ್ಯಾ ಕರಡಿಯನ್ನು ಬಿಡುವ ಧೋರಣೆ ಖಂಡನೀಯ; ಸ್ವತಂತ್ರ ಭಾರತ ತನ್ನ ಪ್ರಜೆಗಳಿಗೆ ವೈಯಕ್ತಿಕ ಸ್ವಾತಂತ್ರ್ಯ ನೀಡಿದೆ ಎಂಬುದು ನಿನಗೆ ತಿಳಿದಿಲ್ಲವೇ ಎಂದು ಪ್ರಶ್ನಿಸಲಿಚ್ಛಿಸುತ್ತೇನೆ.

ನನ್ನ ಗ್ಯಾರೆ ಹಿಡಿದೆಳೆದು ನಡುಬೀದಿಯಲ್ಲಿ ಬಡಿಯುವಿರಾ? ಅದರ ಬದಲು ಕಂಬ ಹತ್ತಿ ತಂತಿ ಹಿಡಿಯುವುದು ಉತ್ತಮ. ಗೊದ್ದನ ಮಾರ್ಗದರ್ಶಿಗಳಾದ ನಮ್ಮಾಳ್ವಾರರು ಈಗೇಕೆ ನಮ್ಮ ಮಾರ್ಗದರ್ಶನಕ್ಕೆ ಬಾಯಿ ಬಿಡುತ್ತಿದಾರೆ? ಯೂನಿವರ್ಸಿಟಿಯಲ್ಲಿ ಯಾರೂ ದಿಕ್ಕಿಲ್ಲವೇ?

ಗೊದ್ದನದೇನು ಮಹಾ! ನಾನೂ ನೀನೂ ಅಂತಹ ಅತಿರಥ ಮಹಾರಥರಾಗಿದ್ದೂ

ಅನೇಕ ಜಾತಿ ಸಂಗಸಾರಂಗ
ಸಂಧಾವಿಸ್ಸಂಗ ಅನಿಭಿಸಂಗ
ಗಹಕಾರಕಂಗ ವೇಸಂತೋ
ದುಕ್ಖಜಾತಿ ಪುನಪ್ಪುನಂಗ

ಎಂದು ಬುದ್ಧನಾಗುವ ಮೊದಲಿನ ಸಿದ್ಧಾರ್ಥನಂತೆ ಬರಲಿಲ್ಲವೇ? ಈಗಿನ್ನೂ ಸಾವು.

ಗಹ ಕುತಂಗ ವಿಸಂಗ ಖಿತಂಗ
ವಿಸಂಗ ಖರಗತಂಗ ಚಿತ್ತಂಗ

ಎಂಬ ಮಟ್ಟಕ್ಕೆ ಬರುತ್ತಿದ್ದೇವೆ. ಅನಧಿಕಾರಿಯಾದ ಗೊದ್ದನಿಗೆ ಅದೇಕೆ?
But still ಲಾಟ್ರಿಷ್ಟೈಯಿಂಗ
ಎಂದೇ ಅವನು ಒದ್ದಾಡುತ್ತಿರಲಿ.

ಹೆಣ್ಣು ಜೇಡಗಳಿಗೆ ಬಲಿಯಾಗುವ ಗಂಡು ಜೇಡ ಏನನ್ನು ಸೂಚಿಸುತ್ತದೆ? ಸ್ವಲ್ಪ ಯೋಚಿಸು. ಜೀವಂತ ಪ್ರಾಣಿಗಳಲ್ಲಿ ಗಂಡು (male of species) ನಿರ್ವಾರ್ಯ (Superfluous) ಎಂದಲ್ಲವೇ? ಗೊದ್ದನೂ ಅಷ್ಟೇ. ಅವನ ಗಂಡುತನವೂ ಸಂಶಯಾಸ್ಪದ.

ತಾಟಕಿಯು ಗಂಡ ಹೆದರಿದನೇ? ಇಲ್ಲ. ಅವನ ಒದೆ ತಾಳಲಾರದೆ ತಾಟಕಿ ಅವನಿಗಿಂತ ತನ್ನ ತಮ್ಮಂದಿರಾದ ಮಾರೀಚ ಸುಬಾಹುಗಳೇ ಮೇಲೆಂದುಕೊಂಡು ತವರುಮನೆಗೆ ಓಡಿಹೋದಳು. ತಾಟಕಿಯು ಗಂಡ ಬೇಡ, ಗೊದ್ದನ ಅಪ್ಪ ಚೋಳ ತನ್ನ ಹೆಂಡತಿ ಚೋಳಿಗೆ ಹೆದರಿದನೇ? ಬಡಕಲು ಕೋಲು ತೆಗೆದುಕೊಂಡು ಬಾರಿಸಿದ ಎಂದರೆ ಚೋಳಿ ಮುರಿದು ಬಿದ್ದಹಾಗೆಯೇ. ಅವನ ಮಗನಾಗಲು ಗೊದ್ದ ಅಯೋಗ್ಯ. ಅಪ್ಪನಿಂದ ಕಲಿತು ಗಂಡಾಗಲಿ. ಆಮೇಲೆ ಪ್ರೇಮದ ಸುದ್ದಿ.

ಗೊದ್ದನಿಗೇನು ಗೂದೆ? ಅವನ ಭವಿತವ್ಯ ಭವ್ಯವಾಗಿದೆ. ಅವನ ಪದ್ಯ ಓದಿದೆ.

ಪ್ರೇಮರಾಹು ತನ್ನ ಬಾಹು
ಗಳನು ಎತ್ತಿ ಗೋಣಸುತ್ತಿ
ಸುಖದ ಚಂದ್ರ ನೆಂಬಲಾಂದ್ರ
ವನ್ನು ಒಡೆದು ಜುಟ್ಟುಹಿಡಿದು
ಬಡಿಯೆಗೊದ್ದ ಮುರಿದುಬಿದ್ದ
ಸಿದ್ದಿಗಾಗಿ ಒದರಿ ಅತ್
ಗೊದ್ದನಿದ್ದ ಶ್ವಾನವತ್.

ಚೆನ್ನಾಗಿದೆ! ಈ ದುಃಖ ತನಗೆ ಬರಲೇ ಇಲ್ಲವೆಂದೂ ತಾನು ಅನಿಕೇತವ ಮತಿಯಾಗಿ ಅನ್ನಮಯದಿಂದ ಆನಂದಮಯಕ್ಕೇರಿದೆನೆಂದೂ ಬರೆದುದಾದರೆ ಈ ಅಪರಾಧೀಕವಿಗೆ ಯಾವುದಾದರೂ ವಿಶ್ವವಿದ್ಯಾಲಯದ ದರ್ಶನ ಪೀಠವೋ ಉಪಕುಲಪತಿತ್ವವೋ ಸಿಕ್ಕುಬಿಡುತ್ತದೆ!

ಸಿಕ್ಕಲಿ, ಹಾಳಾಗಲಿ, ಉದ್ಧಾರವಾಗಿಬಿಡಲಿ, ನಮಗೇನು ಅದರಿಂದ? ಅವನದೂ ಒಂದು ಸಮಸ್ಯೆಯೆಂದು ಭಾವಿಸಿದ ನಿಮ್ಮನ್ನು ಏನುಮಾಡಬೇಕೋ ತಿಳಿಯದು.

ಬೇಗಬರುವೆ, ಬಂದುಕಾಣುವೆ

ಎಂದು ನಿನ್ನ ಆತ್ಮೀಯ
ಅ. ರಾ. ಸೇ.

ಮುಳ್ಳೂರಿನ ಪತ್ರ

ಒಬ್ಬ ತಲೆಯ ಮೇಲೆ ಅರಪಾವು ಹರ್ಸ ಮೆಣಸನ್ನು ಇಟ್ಟು, ಒಂದು ಒರಳು ಕಲ್ಲಿನಿಂದ ಅರೆದರೆ ಅರೆಸಿಕೊಂಡ ವ್ಯಕ್ತಿಗೆ ಹೇಗಾಗುತ್ತೆ ನೋಡಿ, ಹಾಗಾಯ್ತು ನನಗೂನೂವೆ, ಮುಳ್ಳೂರಿನ ಶ್ಯಾನುಭೋಗನ ಪತ್ರವನ್ನು ಪಠಿಸಿದಾಗ.

ಅವನ ಪತ್ರ ಹೀಗಿತ್ತು.

ಶ್ರೀ ಅಮಲ್ದಾರ್ರೆ ಹುಜೂರರ ಸನ್ನಿಧಿಯಲ್ಲಿ ಗುಲಾಮನ ಸಾಷ್ಟಾಂಗ ದಂಡ ಪ್ರಣಾಮಗಳು. ಖಾವಂದರವರ ಸರಹದ್ದಿನ ಹೋಬಳಿ ಮುಳ್ಳೂರಿನ ಪೋಟಿಗೆ ವಸೂಲಿ ಮಾಡುವ ಹಕ್ಕು ಬಾಧ್ಯತೆಗಳನ್ನು ಘನ ಸರ್ಕಾರದವರು, ಗುಲಾಮನಾದ ನನ್ನ ಕೈಯಲ್ಲಿ ಒಪ್ಪಿಸಿರುವುದು ಖಾವಂದರ ನಿವೇದಿತ ವಿಷಯವೇ ಆಗಿದೆ.

ಪ್ರಕೃತದಲ್ಲಿ ಖಾವಂದರವರಲ್ಲಿ ಗುಲಾಮನ ಬಿನ್ನಹವೇನೆಂದರೆ ನಾನು ಮುಳ್ಳೂರಿನ ಪೋಟಿಗೆ ವಸೂಲಿ ಮಾಡಲು ತಳವಾರ, ಕುಳವಾಡಿಗಳನ್ನು ರೈತಾಪಿಗಳ ಮನೆಗಳಿಗೆ ಅಟ್ಟಿದಾಗ ರೈತರುಗಳು ಮನೆಯಲ್ಲಿಯೆ ಇರಲಿಲ್ಲ. ಹತ್ತಾರು ಬಾರಿ ರೈತರ ಮನೆಗಳಿಗೆ ರೂಬು ರೂಬು ನಾನೇ ಹೋಗಿ ನೋಡಿದಾಗಲೂ ಅವರುಗಳು ಸಿಕ್ಕಲಿಲ್ಲ. ಇದಕ್ಕೆ ಕಾರಣವನ್ನು ತಪಶೀಲು ಮಾಡಿದಾಗ ಮುಳ್ಳೂರಿನಲ್ಲಿ ಶುರುವಾಗಿರುವ ಸಂಸ್ಕೃತಿ ಪ್ರಸಾರದ ಹೊಡತವೇ ಎಂದು ತಿಳಿದು ಬಂದಿರುತ್ತೆ. ಅದರಲ್ಲೂ ಮುಖ್ಯವಾಗಿ ನಮ್ಮ ಹೋಬಳಿಯಲ್ಲಿರುವ ತರಲೆ ತಾತಾಚಾರ್ಯನ ಕಾರ್ಯಭಾರವೇ ಇದರ ನಾಂದಿ ಎಂದು ಅರಿಕೆ ಮಾಡಿದರೆ ತಪ್ಪಿಲ್ಲವು.

ಸದರಿ ತಾತಾಚಾರ್ಯನು ಬಿ. ಎ. ಪ್ಯಾಸು ಮಾಡಿದಮೇಲೆ ಕೆಲಸವನ್ನು ಕೋರಿ, ಘನ ಸರ್ಕಾರಕ್ಕೆ ಒಂದು ಅರ್ಜಿಯನ್ನು ಗುಜರಾಯಿಸಿದನಂತೆ. ಅದಕ್ಕೆ ಘನ ಸರ್ಕಾರದವರು ನಕಾರದ ಉತ್ತರವನ್ನು ಅಪ್ಪಣೆ ಕೊಡಿಸಿದರಂತೆ. ಆದ್ದರಿಂದ ತಾತಾಚಾರ್ಯನು ಹಳ್ಳಿಯಲ್ಲೇ ನಿಂತು, ಶಿರದಮೇಲೆ ಟೋಪಿಯನ್ನು ಇಟ್ಟುಕೊಂಡು, ಭೂಧಾನ, ಶ್ರಮಧಾನ, ಶಿಬಿರ, ವನಮಹೋತ್ಸವ, ಹಾಳು ಮೂಳು ಅಂತ ವಿಪರೀತ ಹವ್ಯಾಸಗಳನ್ನು ಏನೂ ಅರಿಯದ ರೈತರಿಗೆ ಹಚ್ಚಿಕೊಟ್ಟು ಅವರುಗಳು ಜಮಾನು ಸಾಗುವಳಿ ಮಾಡುವುದನ್ನು ತಪ್ಪಿಸಿ, ಅವರ ತಲೆಯನ್ನು ಕೆಡಿಸಿದ್ದಾನೆ.

"ರೈತರೇ ನೀವು ನಮ್ಮ ದೇಶದ ಬೆನ್ನುಮೂಳೆ, ಪಕ್ಕೆಲಬು, ಕಾಲಿನ ಎಮುಕೆ ಎಂದೆಲ್ಲಾ ವರ್ಣಿಸಿ, ನೀವು ಚಳುವಳಿಯನ್ನು ಹೂಡಬೇಕು, ಉಳುವವನದೇ

ಜಮೀನು ಮಣ್ಣು ಮನೆ ಎಂದು ಅವರನ್ನೆಲ್ಲಾ ಹುರಿದುಂಬಿಸಿದ್ದಾನೆ. ತತ್ರಾಪಿ ಅವನ ಈ ಕಾರ್ಯದಿಂದ ಮುಳ್ಳೂರಿನ ⅓ ಭಾಗ ರೈತರುಗಳು, ಉಳುವವನದೇ ಜಮೀನು, ಎಂದು ಹೇಳಿಕೊಂಡು ಅಂಡಲೆಯುತ್ತಿದ್ದಾರೆಯೇ ವರಂತು, ಜಮೀನು ಸಾಗುವಳಿ ಮಾಡುತ್ತಲೇ ಇಲ್ಲ.

ಮೇಲೆ ನಮೂದಿಸಿರುವ ಸದರಿ ತಾತಾಚಾರ್ಯನು "ಸಂಸ್ಕೃತಿ ಪ್ರಚಾರ" ಎಂದು ಹೇಳಿ ರೈತರ ತರುಣ ತರುಣಿಯರನ್ನು ಒಂದು ಕಡೆ ಕಲೆಹಾಕಿ, ಅವರಿಗೆ ಹಳ್ಳಿಯ ಹಾಡು, ಜನಪದ ಗೀತೆ, ಕೋಲಾಟ ಇವೇ ವಗೈರೆಗಳನ್ನು ಪಾಠ ಮಾಡಿಸಿ ಅವರನ್ನು ಬೆಂಗ್ಳೂರು, ಬೊಂಬಾಯಿ ಮೊದಲಾದ ಷಹರುಗಳಿಗೆ ಪ್ರಸಾರ ಕೇಂದ್ರಗಳಲ್ಲಿ ಹಾಡಲು ಕಳುಹಿಸಿ, ಅವರಿಗೆ ಷಹರಿನ ಪರಿಚಯ ಮಾಡಿಸಿಕೊಟ್ಟು ದ್ದರಿಂದ, ⅓ ಭಾಗ ರೈತಾಪಿಗಳು ಷಹರಿನ ಆಕರ್ಷಣೆಗಳಿಗೊಳಗಾಗಿ, ಮುಳ್ಳೂರಿಗೆ ಮುಟ್ಟುಗೋಲು ಹಾಕಿ, ಹಳ್ಳಿಯ ಹಾಡುಗಳನ್ನು ಹೇಳಿಕೊಂಡು, ದಿಳ್ಳಿಯಲ್ಲಿಯೇ ಉಳಿದಿದ್ದಾರೆ. ಇಲ್ಲಿ ಅವರ ಭೂಮಿ ದಿಕ್ಕು ದಿವಾಣೆಯಿಲ್ಲದೆ ಬಿದ್ದಿದೆ. ಹಾಳು ಗಂದಾಯವನ್ನು ಕೊಡುವವರೂ ಗತಾಯಿಲ್ಲವಾಗಿದೆ.

ಮಿಕ್ಕ ರೈತಾಪಿಗಳನ್ನು ಸದರಿ ತಾತಾಚಾರ್ಯನು, ಅವರ ಪಾಡಿಗೆ ಬಿಟ್ಟಿಲ್ಲ. ಅವರನ್ನು ಬೆಳಗಿನ ಝಾವವೇ "ಶ್ರಮದಾನ" ಅಂತ ಹೇಳಿ ಯಾವುದೋ ಕಾಡಿಗೆ ಕರೆದುಕೊಂಡು ಹೋಗಿ, ರಸ್ತೆ ಮಾಡಿಸುವುದು, ಜನವಸತಿಯೇ ಇಲ್ಲದ ಕಡೆ ಚರಂಡಿಯನ್ನು ತೋಡಿಸುವುದು, ಈ ರೀತಿ ಅನುಪಯೋಗಿ ಕಾರ್ಯಕ್ರಮಗಳನ್ನು ಮಾಡಿಸುತ್ತಿದ್ದಾನೆ.

ಮೊನ್ನೆ ದಿನ "ವನಮಹೋತ್ಸವ" ಅಂತ ಹೇಳಿ, ನನ್ನ ಹರಕತ್ ಎರಡೆಕರೆ ಜಮೀನಿನಲ್ಲಿ ಹಾಕಿದ್ದ ಹಿಪ್ಪನೇರಳೆ ಸಸಿಗಳನ್ನೆಲ್ಲಾ ಕೀಳಿಸಿ, ಅದು ಯಾರೋ ದೊಡ್ಡ ಮನುಷ್ಯನ ಕೈಲಿ, ನಮ್ಮೂರಿನ ಮುಳ್ಳಾದ್ರಿ ಬೆಟ್ಟದಮೇಲೆ ನೆಡೆಸಿದ. ಅವನ ಚರ್ಯೆ ಒಂದೊಂದಲ್ಲ. ಅವನ ಚೇಷ್ಟೆ ದಿನಕ್ಕೊಂದು ಬಗೆಯಾಗಿದೆ. ಖಾವಂದರವರೇ ರೂಬು ರೂಬು ದಯಮಾಡಿಸಿ, ಜಮಾಬಂದಿ ನಡೆಸಿ, ಸದರಿ ತಾತಾಚಾರ್ಯನನ್ನು ಕರೆಸಿ, ಅಜಮಾಯಿಷಿ ನಡೆಸಿ, ಅವನ ಮೂಗು ಮುರಿದು, ಅವನನ್ನು ಯಾವುದಾದರೂ ಸರ್ಕಾರಿ ಚಾಕರಿಗೆ ಸೇರಿಸಿ, ಮುಳ್ಳೂರನ್ನು ಅವನ ಹುಚ್ಚು ಕಾರುಬಾರಿನಿಂದ ಬಿಡಿಸಿಕೊಡಬೇಕಾಗಿ ಹುಜೂರರಲ್ಲಿ ನಾನು ಬಿನ್ನವಿಸುತ್ತೇನೆ. ಈ ಬಾರಿಯೂ ಪೋಟಿಗೆ ವಸೂಲಿ ಮಾಡದೆ ಇರುವುದರ ಕಾರಣವನ್ನು ಈ ಪತ್ರಮುಖೇನ ಹುಜೂರರಿಗೆ ಗುಲಾಮನಾದ ನಾನು ಅರಿಕೆ ಮಾಡಿಕೊಂಡಿರುತ್ತೇನೆ.

—ಕೆ. ಎನ್. ಕಿಟ್ಟನ್.

ನಿತ್ಯ ಜೀವನದ ಮಹಾ ಯೋಧರು

ಇದು ಸಾಮಾನ್ಯ ಜನರ ಕತೆ, ವರದಿ. ನಮ್ಮ ನಿಮ್ಮಂತಹವರ ಪುಣ್ಯಕತೆ. ಯಾವುದೋ ಜನ್ಮದ ಪಾಪವನ್ನು, ಯಾರೋ ಕೊಟ್ಟ ಶಾಪವನ್ನು ಈಗ ಇಲ್ಲಿ ತಾಳ್ಮೆಯಿಂದ ನಗುನಗುತ ತೀರಿಸುವವರ ಸೊಬಗು ಜೀವನದ ವರದಿಯಿದು. ಅರ್ಜಿಗುಜರಾಯಿಸುವವರ ಧೀರೋದಾತ್ತ ಕಾವ್ಯದ ತುಣುಕು ಇದು.

ಇವರುಗಳು ಸಮವಸ್ತ್ರ ಧರಿಸುವುದಿಲ್ಲ. ರಾಷ್ಟ್ರಪತಿಗಳು ವರ್ಷಕ್ಕೊಮ್ಮೆ ಇವರುಗಳಿಗೆ ಸನ್ನದು ಕೊಟ್ಟು ಮಾರ್ಯಾದೆ ಮಾಡಿ ಪದ್ಮ ತೊಡಿಸುವುದಿಲ್ಲ. ಸ್ಥಳೀಯ ಸರ್ಕಾರದವರು ಸಾರ್ವಜನಿಕ ಪ್ರಶಸ್ತಿಯನ್ನು ಕೊಡುವುದಿಲ್ಲ. ಆದರೂ ಇವರುಗಳು ಧೈರ್ಯದಿಂದ, ತಾಳ್ಮೆಯಿಂದ, ಅದು ಬೇಕೇ ಬೇಕು, ಇದು ಇರಲೇಬೇಕು, ಎಂದು ಮೊಂಡು ಹಾಕದೆ, ಕಾರ್ಯತತ್ಪರರಾಗುವುದನ್ನು ನೋಡಿದರೆ ಭೇಷ್ ಅಂತ ಹೇಳಲೇಬೇಕು.

ಯಾವ ಕಚೇರಿ, ಕಾರ್ಖಾನೆ, ಶಾಲೆ, ಸ್ಮಶಾನ ಎಲ್ಲಿ ನೋಡಿದರೂ ಇರಬಹುದಾದ ಖಾಲಿ ಜಾಗಕ್ಕೆ ಅರ್ಜಿ ಗುಜರಾಯಿಸುವರಲ್ಲಿ ಒಬ್ಬನನ್ನು ನೋಡಬಹುದು. ಒಬ್ಬ ನಿಂತಿರುತ್ತಾನೆ ಮುಂದೆ. ಆದರೆ ಅವನೊಬ್ಬನೇ ಅಲ್ಲ, ಇಬ್ಬರಲ್ಲ, ಮೂವರಲ್ಲ, ನೂರಲ್ಲ, ಸಾವಿರದ ಗುಂಪಲ್ಲ ದಶಸಹಸ್ರ, ಲಕ್ಷ ಲಕ್ಷ ಸಂಖ್ಯಾತನಾಗಿ ನಿಂತಿರುತ್ತಾನೆ. ದಶಮಾಂಶ ಪದ್ಧತಿ ಬಂದ ಮೇಲಂತೂ ಮುಂದು ಮುಂದಕ್ಕೆ ಸೊನ್ನೆ ಸುತ್ತುತ್ತಲೇ ಸಾಗುತ್ತಾನೆ, ಬೇಸರವಿಲ್ಲದೆ, ಕಾತುರನಾಗದೆ.

ಆತ್ಮೀಯ ಪರಿಚಯ ಮಾಡಿಕೊಳ್ಳೋಣ ಬನ್ನಿ.

ನಿಧಾನ ಸದನದ ದಿಡ್ಡಿಬಾಗಿಲಲ್ಲಿ ದೊಡ್ಡ ಲಕ್ಕೋಟೆ ಹಿಡಿದು ನಿಂತಿರುವ ಶಾಮಣ್ಣನನ್ನು ಭೇಟಿಯಾಗೋಣ. ಅವನೇನನ್ನುತ್ತಾನೆ ಕೇಳಿಸಿಕೊಳ್ಳೋಣ. "ಸೋಮಿ! ನಮ್ಮ ಹಳ್ಳೀಗೆ ಹೋದ ವರುಸ ಬಂದು, ನಮ್ಮ ಜೋಪಡೀಲಿ ತಂಗಿದ್ದು, ನಾವು ಕೊಟ್ಟ ಕವಳ ತಿಂದು, ಚೆಂದಾಗಿದ್ದೀರಾ ಅಂತ ಆತ ಕೇಳಿದ್ರು. ಹಿಂದೆ, ನಮ್ಮ ಜಮೀನ ಪಕ್ಕದಲ್ಲಿ ತೊರೆ ಬಂದು ಜಮೀನು ಆಜೂಬಾಜು ಕೊರಕಲು ಬಿದ್ದ್ಹೋಯ್ತು. ಅದನ್ನೂ ದುರಸ್ತುಮಾಡಿ ಅಂತ ಅಮಿಲ್ದಾರರನ್ನು

ಕೇಳಿದರೆ, ಅವ್ರು ಕೊರಕಲು ಬಿದ್ದುಹೋದ ಜಮೀನಿನ ಕಂದಾಯ, ನಾಲು ವರ್ಷದ್ದು ಬಾಕಿ ಸಹಿತ ಮೊದಲು ಕೊಡಿ ಅಂತ ಆರ್ಡರ್ ಮಾಡಿ ಹೋದರು. ತಾವೇನಾದರೂ ಸಹಾಯ ಮಾಡಿ ನ್ಯಾಯ ದೊರಕಿಸಿ ಕೊಟ್ಟರೆ ಸೈ ಅಂತೀವಿ ಎಂದೆ.

ಬೆಂಗಳೂರಿಗೆ ಬನ್ನಿ ನಾ ಮಾಡಿಸ್ಕೊಡ್ತೀನಿ. ಅಂದರು. ಇಲ್ಲಿಗೆ ಬಂದು ಕಾಯ್ತಾ ಇದೀವಿ. ಇನ್ನೂ ಆ ವ್ಯೆಯ್ನ ಸಿಕ್ಕಿಲ್ಲ ಅಂದ ಶಾಮಣ್ಣ.

ಕಾರ್ಖಾನೆ ಹೊರಬಾಗಿಲ ಬಳಿ. ಕೆಲಸ ಖಾಲಿ ಇಲ್ಲ ಅಂತ ಒಂದು ದೊಡ್ಡ ಬೋರ್ಡು ತೂಗಿ ಹಾಕಿಲ್ವೆ–ಆದರೆ ಕೆಳಗೆ ನಿಂತಿದ್ದಾನಲ್ಲ ಆಮುರ್ಗಂ ಅವನ ಭೇಟಿ ಮಾಡೋಣ ಬನ್ನಿ.

"ನಾನು ಆ ಮಿಲ್ಲಿನಲ್ಲಿ ೬ ತಿಂಗಳು ಕೆಲಸಕ್ಕಿದ್ದೆ. ಮೂರು ಸರ್ತಿ ಸಂಪು ಹೂಡಿಸಿದೆ. ಕಡೇ ಸಾರಿ ಷಣ್ಮುಖಂ ಬಂದು ನನ್ನ ಪಟ್ಟ ಕಿತ್ತುಕೊಂಡ. ಬೇಜಾರು ಬಂದು ಇನ್ನೊಂದು ಮಿಲ್ಲಿಗೆ ಹೋದೆ. ಅಲ್ಲಿ ಮೂರು ತಿಂಗಳಿದ್ದೆ. ಎಲ್ಲರೂ ಸಂಪು ಹೂಡಿದಾಗ ನಾನು ಕೆಲಸಕ್ಕೆ ಹಾಜರಿಯಾದೆ. ಮನೆಗೆ ಬರುವಾಗ ಕತ್ತಲಲ್ಲಿ ಯಾರೋ ಕಾಲು ಮುರಿದರು. ಅಸ್ಪತ್ರೆಯಿಂದ ಹಿಂತಿರುಗಿದ ಮೇಲೆ ಅಲ್ಲಿ ಕೆಲಸ ಮಾಡೋದು ಒಳ್ಳೇದಲ್ಲ ಅಂತ ಮತ್ತೊಂದು ಕಾರ್ಖಾನೆಗೆ ಹೋಗಿ ಸೇರಿಕೊಂಡೆ. ಎರಡೇ ತಿಂಗಳಲ್ಲಿ ಆ ಕಾರ್ಖಾನೆ ದಿವಾಳಿಯಾಯ್ತು. ಕಾರ್ಖಾನೆ ಮುಚ್ಚಿದರು. ಮುಚ್ಚಕೂಡದು ಅಂತ ಜಗಳ ಕಾದೆ. ಕೈಮುರಿದು ಹೋಯ್ತು.

ಕೈಕಾಲು ಊನವಾದೋರು ವಾಚ್‌ಮನ್ ಕೆಲಸಕ್ಕೆ ಲಾಯಕ್ಕು ಅದಕ್ಕೇ ಇಲ್ಲಿಗೆ ಬಂದಿದ್ದೇನೆ. ತಲೆ ಮೇಲಿರೋ ಬೋರ್ಡು ನೋಡಬೇಡಿ; ಇಲ್ಲಿನ ಕೆಲಸಗಾರರ ಸಂಘದ ಅಧ್ಯಕ್ಷನಿಗೇ ನನ್ನ ತಂಗಿ ಕೊಟ್ಟಿರೋದು. ಇಲ್ಲಿ ಕೆಲಸ ಖಂಡಿತ. ಆದರೆ ಕಾಲ ಬರಬೇಕು! ಅರ್ಜಿ ಗುಜರಾಯಿಸಿದ್ದೇನೆ.

ಮೂರು ತಿಂಗಳಿಂದ ದಿನಾಲು ಬಂದು ಕಾಯುತ್ತಿದ್ದೇನೆ. ಕೊಡಿಸ್ತೀನಿ ತಡಿ ಅಂತ ಇವ ಅಂತಾನೆ. ತಡೀತಾನೇ ಇದೀನಿ."

ಶಾಲೆಯ ಬಾಗಿಲಲ್ಲಿ ಕಾದಿದಾನೆ ಯುವಕ, ಮನೋಹರ. ಅವನ ಭೇಟಿಯಾಗೋಣ. ಅವನಂದಿದ್ದನ್ನು ಕೇಳೋಣ.

ಇಂಟರ್ ಆದಾಗ ಸೀಟ್ ಕೊಡಿ ಎಂದು ಅರ್ಜಿ ಹಾಕಿದೆ. ಬಿ.ಎ. ಆದರೆ ಅವಕಾಶ ಹೆಚ್ಚು ಅಂದರು. ಎರಡು ವರ್ಷ ಓದಿ ಬಿ.ಎ. ಮಾಡಿದೆ. ಎಂ.ಎ. ಆದರೆ ಮತ್ತೂ ಚೆನ್ನ ಅಂದರು. ಎಂ.ಎ. ಮಾಡಿ ಒಂದು ಅರ್ಜಿ ಗುಜರಾಯಿಸಿದೆ ಪ್ರಿ ಯೂನಿವರ್ಸಿಟಿ ಆದೋರಿಗೆ ಮಾತ್ರ ಪ್ರವೇಶ ಅಂದರು. ಈ ವರ್ಷ ಅದನ್ನೂ ಮಾಡಿ ಬಂದೆ ಅರ್ಜಿ ಹಾಕಿದೆ. ಎಂ.ಎ. ಆದೋರು ನಾಲಾಯಕ್ಕು ವಯಸ್ಸಾಗಿ

ಹೋಯ್ತು ಅಂದರು. ಕೋರ್ಟಿಗೆ ಅರ್ಜಿ ಗುಜರಾಯಿಸಿ ಇಲ್ಲಿಗೆ ಬಂದು ಬಾಗಿಲ ಬಳಿ ಕಾಯ್ತಿದ್ದೇನೆ ಅಂದ ಅವ.

ಎಷ್ಟು ತಾಳ್ಮೆ! ಎಷ್ಟು ಸಹನೆ! ಕಾರ್ಯ ತತ್ಪರತೆಗೆ ಇವರಿಗಿಂತಾ ಹಿರಿದಾದವರುಂಟೆ! ಕ್ಯಾನಬಿ ಯಾಂಕಾ ತರಹ ಕಾದೇ ಇದ್ದಾರೆ, ಇಂತಹ ಲಕ್ಷಗಟ್ಟಲೆ ಶೂರರು, ನಮ್ಮ ನಿತ್ಯ ಜೀವನದಲ್ಲಿ. ಯಾವುದಕ್ಕೂ ಹಿಮ್ಮೆಟ್ಟದೆ ಏನು ಬಂದರೂ ಹೆದರದೆ, ತಲೆ ತಗ್ಗಿಸಿಕೊಂಡು ಕಾದೇ ಇರುತ್ತಾರೆ.

ಇಂತಹ ಕೋಟಿ ಕೋಟಿ ನಿತ್ಯ ಜೀವನದ ಶೂರರಿರುವ ನಮ್ಮ ಭಾರತವು, ಚೀಣೀ ಆಕ್ರಮಣಕ್ಕೆ ಹೆದರಬೇಕೆ? ನಿತ್ಯ ಜೀವನದ ಈ ಶೂರರನ್ನು ಸಮರ ಯೋಧರನ್ನಾಗಿ ಹೆಸರು ಮಾರ್ಪಡಿಸಿದರಾಯ್ತು ಆ ಜೀವ ಪರ್ಯಂತ ಕಾದು ಕಾದು ಕಾದಾಡುತ್ತಾರೆ. ಅಲ್ಲವೇ ?

ಬಚ್ಚು.



ರೇಡಿಯೋ ಸಂಗೀತ ಸಮ್ಮೇಳನವನ್ನು ಕೇಳುವುದಕ್ಕೆ ಪೂರ್ವ ಸಿದ್ಧತೆ!!

ಹುಷಾರ್ ಕತೆ

ಬಲು ಹುಷಾರ್ ಆಸಾಮಿ ಕೇಶವಲು. ಸಂಸಾರ ಮಾಡುಕ್ಕೆ ಶುರುಮಾಡಿದ ದಿವಸದಿಂದ ತನ್ನ ಸೌದೆ ಅಂಗಡಿಯಲ್ಲಿ ಒಂದು ಪದ್ಧತಿ ನಡೆಸಿಕೊಂಡು ಬಂದಿದ್ದ. ಸಂಪಾದಿಸಿದ ಚೆಕ್ಕು, ನೋಟುಗಳನ್ನು ಬ್ಯಾಂಕಿಗೆ ಕಳಿಸಿ ಚಿಲ್ಲರೆ ನಾಣ್ಯಗಳನ್ನು ಮನೆಗೆ ತರುತ್ತಿದ್ದ. ರೂಪಾಯಿ, ಎಂಟಾಣೆ ನಾಲ್ಕಾಣೆ ಬೆಳ್ಳಿ ನಾಣ್ಯಗಳನ್ನು ತನ್ನ ಕೊಠಡಿಯಲ್ಲಿ ಯಾರಿಗೂ ತಿಳಿಯದಂತೆ ಶೇಖರಿಸುತ್ತಿದ್ದ. ಮಿಕ್ಕ ಚಿಲ್ಲರೆಯನ್ನು ಹೆಂಡತಿಗೆ ಮನೆ ಖರ್ಚಿಗೆಂದು ಕೊಟ್ಟು "ಇಷ್ಟರಲ್ಲೇ ಜಾಣೆಯಾಗಿ ಸಂಸಾರ ನಡೆಸಬೇಕು ನೀನು" ಎಂದು ಆದರದ ಉಪದೇಶ ಮಾಡುತ್ತಿದ್ದ.

ತನ್ನ ಕೊಠಡಿಯಲ್ಲಿ ಮೂಲೆಯೊಂದರಲ್ಲಿ, ತ್ರಿಪಾದಿಯ ಮೇಲಂತಸ್ತಿನ ಮೇಲೆ ನಾಗೋಲಿ ಮಡಕೆಯೊಂದನ್ನು ಇಟ್ಟಿದ್ದ. "ಮದುವೆಯ ಸವಿ ನೆನಪಿಗೆ ಕಣೆ, ನಿಮ್ಮಪ್ಪನ ನಿತ್ಯ ಸ್ಮರಣೆಗೆ ಚೆನ್ನ ಎಂದು ಹೆಂಡತಿಗೆ ಹೇಳಿ ಅವಳನ್ನು ಉಬ್ಬಿಸಿದ್ದ. ಆ ಮಡಕೆಯ ಬಾಯಿಗೆ ದಪ್ಪ ಬಟ್ಟೆ ಕಟ್ಟಿ ಅದರಲ್ಲೊಂದು ಸಣ್ಣ ತೂತುಮಾಡಿದ್ದ. ಬೆಳ್ಳಿ ನಾಣ್ಯಗಳನ್ನೆಲ್ಲಾ ದಿನಾಲೂ ಆ ಮಡಕೆಗೆ ತುಂಬುತ್ತಿದ್ದ.

"ಎತ್ತು ಮುದ್ದಾಡಿದ ತಮ್ಮ ನಾಗರ ಪ್ರತಿಷ್ಠೆ ಮಾಡುತ್ತಾನಂತೆ. ತೌರಿಗೆ ಹೋಗಿ ಒಂದು ತಿಂಗಳಲ್ಲೆ ಬಂದುಬಿಡ್ತೀನಿ ಅಂದ್ರೆ. ಮುಸಿರೆ ತಿಕ್ಕೋಳು ಬೆಳಿಗ್ಗೆ ಬಂದು ಹಾಲು ಕಾಯಿಸಿಟ್ಟು ಮನೆಗೆಲಸ ಮಾಡಿಟ್ಟು ಹೋಗ್ತಾಳೆ. ಊಟ ನಿಮ್ಮಣ್ಣನ ಮನೇಲಿ ಮಾಡಿಕೊಂಡೇ ಬಂದುಬಿಡಿ" ಎಂದು ಅವನ ಹೆಂಡತಿ ಹೇಳಿ ತೌರಿಗೆ ಹೋದಳಂತೆ.

ಮೂರು ವಾರ ಸುಖವಾಗಿ ಕೇಶವಲು ಕಾಲ ಕಳೆದ. ಬೆಳ್ಳಿಯಲ್ಲದ ಚಿಲ್ಲರೆ ನಾಣ್ಯಗಳನ್ನು ಮನೆಗೆ ತರುವ ಗೋಜೇ ಇಲ್ಲದೆ ಅವನ್ನೂ ಬ್ಯಾಂಕಿಗೆ ಕಟ್ಟಿಯೇ ಬರುತ್ತಿದ್ದ.

ಇನ್ನೊಂದು ವಾರ ವಾಯಿದೆ ಇದೆ ಅವನ ಹೆಂಡತಿ ಹಿಂತಿರುಗಲು ಬರುವ ಭಾನುವಾರ ಅವಳು ಬರುತ್ತೇನೆಂದು ಬರೆದ ಕಾಗದ ಹಿಂದಿನ ಭಾನುವಾರವೇ ಬಂದಿತ್ತು. ಸೋಮವಾರ ತಂದಿದ್ದ ಬೆಳ್ಳಿ ನಾಣ್ಯಗಳನ್ನೂ ನಾಗೋಲಿ ಮಡಕೆಗೆ ಹಾಕುತ್ತಾನೆ! ಅವು ಒಳಗೆ ಇಳಿಯಲೇ ಇಲ್ಲ. ಎಲಾ! ಎರಡೇ ವರ್ಷಗಳಲ್ಲಿ ಮಡಕೆ ತುಂಬಿತೇ? ಎಂದು ಆಶ್ಚರ್ಯವಾಯಿತು ಕೇಶವಲುಗೆ. ಅಲ್ಲಾಡಿಸಿ ನೋಡೋಣ ಮಡಕೆಯನ್ನು ಎಂದು ಅಲ್ಲಾಡಿಸಿದ. ಮಡಕೆ ಜಗ್ಗಲಿಲ್ಲ. ಸ್ವಲ್ಪ ಝೋಕು ಕೊಟ್ಟ. ಮಡಕೆ ಕೆಳಕ್ಕೆ ಬಿತ್ತು ಒಡೆದುಹೋಯ್ತು. ನಾಣ್ಯಗಳೆಲ್ಲಾ ಕೊಠಡಿ ತುಂಬಾ ಚೆಲ್ಲಾಪಿಲ್ಲಿಯಾಗಿ ಹರಡಿ ಹೋದುವು.

ಸೊಂಟ ಬಗ್ಗಿಸಿ ಕೊತು ನಾಣ್ಯಗಳೆಲ್ಲವನ್ನೂ ಶೇಖರಿಸಿದ. ಮಂಚದ ಕೆಳಗೆ ಪೆಠಾರಿಯ ಹಿಂದೆ, ಮೇಜಿನ ಸಂದು ಕೂಡ ಹುಡಿಕಿ, ಲೆಕ್ಕ ಹಾಕುತ್ತಾನೆ ಸಾವಿರದ ನಾನ್ನೂರು ರೂಪಾಯಿ!! ಮಾರನೆ ಬೆಳಿಗ್ಗೆ ತೆಗೆದುಕೊಂಡು ಹೋಗಿ ಉಳಿತಾಯದ ಲೆಕ್ಕಕ್ಕೆ ಜಮಾ ಮಾಡಿ, ಹಿರಿ ಹಿಗ್ಗಿದ.

ಹೆಂಡತಿ ಭಾನುವಾರ ಬೆಳಿಗ್ಗೆ ಬಂದಿಳಿದಳು ಜಟ್ಕಾದಲ್ಲಿ, ಮನೆಯ ಬಾಗಿಲ ಬಳಿಯಲ್ಲಿ. ಕಸ ಮುಸುರೆಯಾಕೆ ಬಾಗಿಲು ತೆಗೆದು ಅಮ್ಮಾವರನ್ನು ಎದುರುಗೊಂಡು ಒಳಕ್ಕೆ ಸಾಮಾನು ತೆಗೆದುಕೊಂಡು ಹೋದಳು. ಅಮ್ಮಾವ್ರು ಯಜಮಾನರ ಕೊಠಡಿಗೆ ಹೋದರು. ನೋಡ್ತಾಳೆ! ರಾಯರು ಇನ್ನೂ ನಿದ್ರೆ ಮಾಡ್ತಾ ಇದ್ದಾರೆ. ಒಮ್ಮೆ ಕೆಮ್ಮಿದಳು ಆಕೆ. ಏನೂ ಪ್ರಯೋಜನವಾಗಲಿಲ್ಲ. ಇನ್ನೊಮ್ಮೆ ಕೆಮ್ಮಿದಳು. ಸ್ವಲ್ಪ ಜೋರಾಗಿ. ಕೇಶವಲು ಕಣ್ಣು ಬಿಟ್ಟ. ಬೆಚ್ಚಿ ಬಿದ್ದು ಎದ್ದ. ನೋಡಿದ ಮತ್ತೊಮ್ಮೆ.

" ಯಾವಾಗ ಬಂದೆಯೇ ? " ಎಂದ.

"ಸ್ಟೇಷನ್ನಿಗೆ ಬರೋ ಸೌಜನ್ಯ ಇಲ್ಲದೇ ಇದ್ದರೂ, ಹೆಣ್ಣು ಹೆಂಗಸು ಪೋರ್ಟರ ರೊಂದಿಗೆ, ಜಟ್ಕಾದವರೊಂದಿಗೆ ಕಾದಾಡೋದು ತಪ್ಪಿಸದೇ ಇದ್ದರೂ, ಎದುರಿಗೆ ಬಂದು ನಿಂತರೆ, ಬಂದೆಯಾ ಅಂತಲಾದರೂ ಕೇಳಿದಿರಲ್ಲ!! ನಾನೇ ಪುಣ್ಯವಂತೆ ಅಂದ್ರೆ " ಎಂದಳು. ದುರ್ಗಾಷ್ಟಮಿ ಮುಖ ಮಾಡಿಕೊಂಡು.

ಕೇಶವಲು ಆಗ ಮಂಚದ ಪಕ್ಕದಲ್ಲಿದ್ದ ಗಡಿಯಾರ ನೋಡಿದ. ಹೆಂಡತಿ ಕಡೆ ನೋಡಿದ. " ಇಲ್ಲಿ ನೋಡೆ! ಐದು ಗಂಟೆಗೆ ಅಲಾರಂ ಇಟ್ಟಿದ್ದೀನಿ. ರಾತ್ರಿ ಎರಡು ಗಂಟೆಗೇ ಗಡಿಯಾರ ನಿಂತು ಹೋಗಿದೆ " ಎಂದು ಗಡಿಯಾರ ತೋರಿಸಿದ. ಪ್ರಸನ್ನಳಾದಳು ಆಕೆ ಆಗ. ಕಾಫಿ ಕೊಟ್ಟಾಗ ಊರಿಂದ ತಂದಿದ್ದ ಗುಳಪಾವಟೆ, ರವೆ ಉಂಡೇನೂ ಕೊಟ್ಟಳು.

೯ರ ಹೊತ್ತಿಗೆ ಅಂಗಡಿ ಕಡೆ ಹೊರಟು ಹೋದ ಕೇಶವಲು.

೧೦ ಗಂಟೆ ಹೊತ್ತಿಗೆ ಕಸ ಮುಸುರೆಯವಳು ಬಂದಳು. ಬಟ್ಟೆ ಒಗೆಯುವು ದಕ್ಕೆಂದು ಬಟ್ಟೆಗಳನ್ನೆಲ್ಲಾ ಬಕೆಟ್ಟಿಗೆ ಹಾಕಿ ಸೋಪು ಹುಡಿ ಚೆಲ್ಲಿ ನೆನೆಯಲಿಕ್ಕೆ ಬಿಟ್ಟು ಅಮ್ಮಾವ್ರ ಬಳಿ ಬಂದಳು. ಅಮ್ಮಾವ್ರ ಕೈಲಿ ಮೂರು ಮುಕ್ಕಾಲು ರೂಪಾಯಿ ಕೊಟ್ಟಳು. " ಅಮ್ಮಾ! ನೀವು ತೌರಿಗೆ ಹೋಗೋದು ಒಳ್ಳೆಯದಲ್ಲ. ಇನ್ನು ಮೇಲೆ ಹೋಗಬೇಡಿ. ನಾನು ಅನುಭವಸ್ಥೆ. ನನ್ನ ಮಾತು ಕೇಳಿ " ಎಂದಳು.

" ಏನೇ ಹಾಗಂದ್ರೆ " ಅಂದರು ಅಮ್ಮಾವ್ರು.

" ಬುಧುವಾರ ರಾಯರ ಕೊಠಡಿ ಗುಡಿಸ್ತಾಗ ಹೊಸಿಲ ಹತ್ತಿರ ಮೂರು ಪಾವಲಿ ಬಿದ್ದಿತ್ತು. ಪಾವಲಿ ನಾಣ್ಯ ರಾಯರ ಜೇಬಿನಿಂದ ಬಿದ್ದಿರಬಹುದು ಎಂದು ಅಂದು ಕೊಂಡು ಅವರ ಮೇಜಿನ ತುದಿಮೇಲಿರಿಸಿ ಬಂದೆ.

ಗುರುವಾರ ಗುಡಿಸಲು ಹೋದಾಗ ಪೆಠಾರಿ ಸಂದಿನಲ್ಲಿ ಎರಡು ಎಂಟಾಣೆ ನಾಣ್ಯಗಳು ಇದ್ದುವು. ಅಲ್ಲಿಗೆ ಹೇಗೆ ನಾಣ್ಯಗಳು ನಡೆದುಕೊಂಡು ಬರುತ್ತವೆ?

ಎಂದೆನಿಸಿತು. ಮೇಜ ನೋಡಿದೆ. ನಾನಿರಿಸಿದ್ದ ಮೂರು ಪಾವಲಿಗಳೂ ಅಲ್ಲೇ ಇದ್ದುವು. ಐದನ್ನು ಮಡಲಿಗೆ ಹಾಕ್ಕೊಂಡು ಬಂದೆ.

ಶುಕ್ರವಾರ ಗುಡಿಸುಕ್ಕೆ ಹೋದಾಗ ಮಂಚದ ಕೆಳಗೇ ಎರಡು ರೂಪಾಯಿಗಳು ಬಿದ್ದಿದ್ದವು. ಚೆನ್ನಾಗಿ ಅರ್ಥವಾಯಿತು. ಬೇಗ ಅವನ್ನೂ ತೆಗೆದುಕೊಂಡು ಗುಡಿಸದೆ ಹೊರಕ್ಕೆ ಬಂದೆ.

ಶನಿವಾರ ರಾಯರ ಕೊಠಡಿಗೆ ಹೋಗಲೇ ಇಲ್ಲ. ನೀವು ತೌರಿಗೆ ಹೋಗಬೇಡಿ ಅಮ್ಮ! ನೀವು ಹೋದರೆ ಈ ಮನೆಗೆ ಕೆಲಸಕ್ಕೆ ನಾನು ಬರುಲ್ಲಮ್ಮಾ. ನಾನು ಮರ್ಯಾದಸ್ಥೆ. ನನ್ನ ಮಕ್ಕಳು ಏನಂದಾರು" ಎಂದು ಕಸಮುಸುರೆಯವಳು ತನ್ನ ವರದಿ ಒಪ್ಪಿಸಿದಳು.

"ನೀನೂ ಬರಬೇಡ ಈ ಮನೆಗೆ, ನಾನು ಈ ಸಂಜೆಯೇ ತಿರುಗಿ ತೌರಿಗೆ ಹೋಗುತ್ತೇನೆ. ಇಂತಹವರ ಸಹವಾಸವೇ ಬೇಡ ನಂಗೆ. ಗತಿ ಕೆಟ್ಟು ಬಂದಿಲ್ಲ ಇಲ್ಲಿಗೆ ಎಂದು ಅಮ್ಮಾವ್ರು ರೇಗುತ್ತಾ ಹೇಳಿದರು.

ಮಧ್ಯಾಹ್ನ ೧ ಗಂಟೆ ಹೊತ್ತಿಗೆ ಕೇಶವಲು ಮನೆಗೆ ಬಂದ. ಬಚ್ಚಲ ಮನೆಗೆ ಹೋಗಿ ಕೈ ಕಾಲು ತೊಳೆದುಕೊಂಡು ಬಂದು ಊಟಕ್ಕೆ ಕುಳಿತ.

ಮೌನದಲ್ಲೇ ಬಡಿಸಾಯ್ತು. ಏನೋ ಆಗಿದೆ ಇವತ್ತು ಎಂದು ಕೇಶವಲೂಗೆ ಅನ್ನಿಸದೆ ಇರಲಿಲ್ಲ. ವಠಾರಕ್ಕೆ ಬಂದು ಕುಳಿತ. ಎಲಡಿಕೆ ತಟ್ಟೆ ಎದುರಿಗಿಟ್ಟು ಆಕೆ ಊಟಕ್ಕೆ ಒಳಕ್ಕೆ ಹೋದಳು. ಸ್ವಲ್ಪ ಹೊತ್ತಾದ ನಂತರ ಬಂದು ವಠಾರದಲ್ಲಿ ಸಾಮಾನು ಕಟ್ಟಲು ಶುರುಮಾಡಿದಳು.

"ಏನೇ! ಸಾಮಾನು ಕಟ್ಟುತ್ತಾ ಇದಿ ಬೆಳಿಗ್ಗೆ ಹಿಂತಿರುಗಿ ಸಂಜೆಗೆ ಮರಳಿ ಪ್ರಯಾಣ ಏನಾದರೂ ಉಂಟೇ" ಎಂದ ಕೇಶವುಲು.

"ಮುಸಿರೆ ತಿಕ್ಕೋರು ಬೇಕಾದ ಮನೇಲಿ ನನಗೇನು ಕೆಲಸ. ಅಪ್ಪನ ಮನೆಗೇ ಹೋಗುತ್ತೇನೆ. ನಾನಿರೋತನಕ ಒಂದು ಹಿಡಿ ಅನ್ನ ಹಾಕೇ ಹಾಕ್ತಾರೆ. ಅಲ್ಲಿ ಮಾನವಾಗಾದರೂ ಬದುಕಿರಬಹುದು" ಎಂದಳು.

"ಎಲ ಎಲಾ! ನೀನೇ ಬೇಕಾದರೆ ಮುಸಿರೆ ತಿಕ್ಕೊಂಡಿರೇ ಇಲ್ಲೇನೇ ಯಾರು ಬೇಡ ಅಂದ್ರು" ಎಂದ ಗೇಲಿಮಾಡುತ್ತ ಕೇಶವಲು ಏನೂ ಅರಿಯದೆ ಇದ್ದ ಪ್ರಾಣಿ; ಪಾಪ!

ಗೇಲಿ ತಡೆಯಕ್ಕೆ ಆಗಲಿ ಅಮ್ಮಾವ್ರಿಗೆ. ಬಡಬಡಿಸಿ ಹೇಳಿದರು ರಾಯರ ಕೃತ್ರಿಮವನ್ನೆಲ್ಲಾ. ರಂಗು ಕಟ್ಟಿ ಬಣ್ಣಿಸಿದರು ಯಜಮಾನರ ದುರ್ನೀತಿಯ ಸಂಚುಗಳನ್ನು. ಕಸಮುಸರೆಯವಳು ಮಾನಸ್ಥೆ ಯಾದ್ದರಿಂದ, ನಿಮ್ಮ ಆಶಾಬಲೆಗೆ ಬೀಳದೆ ನನಗೆ ಬಂದಕೂಡಲೇ ಹೇಳಿದಳು, ಬೇರೆ ಯಾರಾದರೂ ಆಗಿದ್ದರೆ ನಿಮ್ಮಂತ ಹವರೇ ಆಗಿದ್ದರೆ? ನಾನು ಹೇಗಾರೂ ಇರಬೇಕು ಈ ಮನೇಲಿ. ನಿಮಗೆ

ಹೇಗೆ ಬೇಕೋ ಹಾಗೆ ಇದ್ದುಕೊಳ್ಳಿ. ನಾನು ಸಂಜೆ ಟ್ರೈಲಿಗೆ ಹೋಗ್ತೀನಿ" ಎಂದು ಗುಳು ಗುಳು ಅತ್ತೇಬಿಟ್ಟರು ಅಮ್ಮಾವ್ರು.

ಆಗ ಕೇಶವಲುವಿಗೆ ಎಲ್ಲಾ ಅಪಾರ್ಥವೂ ಅರ್ಥವಾಯಿತು ವಿಶದೀ ಕರಿಸಿ ಹೇಳಿದ—ಬೆಳ್ಳಿನಾಣ್ಯದ ಗುಪ್ತ ಉಳಿತಾಯದ ವಿಧಾನವನ್ನು. ನಾಗೋಲಿಮುಡಕೆ ಇದೆಯೇ ನೋಡುಬಾ ಅಂತ ಅಮ್ಮಾವ್ರನ ಕೊಠಡಿಗೆ ಕಳಿಸಿಕೊಟ್ಟ ಇಷ್ಟೆಲ್ಲಾ ಆಡೋರು ಅದನ್ನೇನು ಮಾಡಿದ್ದೀರೋ! ಎಂದಳು ಆಕೆ. "ಅದರ ಚೂರೆಲ್ಲಾ ತಿಪ್ಪೆಗುಂಡಿಗೆ ಹಾಕಿದ್ದೆ. ಬೇಕಾದರೆ ಕೆದಕಿ ನೋಡಿಕೊಂಡುಬಾ" ಎಂದ ಕೇಶವುಲು.

ಹಾಗೆ ಮಾಡಿ ನೋಡಿಕೊಂಡು ಬಂದಳು ಆಕೆ. ಆ ಮಡಕೆ ಚೂರುಗಳೇನೋ ತಿಪ್ಪೆಗುಂಡಿಯಲ್ಲಿದೆ. ಆದರೆ ಆ ಹಣವೆಷ್ಟಿತ್ತು ? ಎಂದಳಾಕೆ.

"ಇಷ್ಟು ರೂಪಾಯಿ ಇತ್ತು. ಬ್ಯಾಂಕಿನಲ್ಲಿ ಉಳಿತಾಯದ ಲೆಕ್ಕಕ್ಕೆ ಮಂಗಳವಾರ ಜಮಾಮಾಡಿ ಬಂದಿದ್ದೇನೆ. ನಾಳೆ ಅಂಗಡಿಯಿಂದ ಪ್ಯಾಸ್‌ಬುಕ್ ತಂದು ತೋರಿಸುತ್ತೇನೆ" ಎಂದು ಅಭಯವಚನ ಪ್ರಮಾಣಮಾಡಿ ಹೇಳಿದಾಗ ಆಕೆ ಸಾಮಾನು ಕಟ್ಟುವುದನ್ನು ನಿಲ್ಲಿಸಿ ; ಎಲಡಿಕೆ ಹಾಕಿಕೊಂಡಳು,

ಸೋಮವಾರ ಊಟಕ್ಕೆ ಬರುವಾಗ ಕೇಶವಲು ಪ್ಯಾಸ್‌ಬುಕ್ ತಂದು ತೋರಿಸಿದಾಗ, ಆಕೆ ಆ ಹಣ ಹೇಗೂ ಮನೇಲಿತ್ತು, ಇಲ್ಲಿಗೇ ತನ್ನಿ ಎಂದು ಆಣತಿ ಇತ್ತಳು.

ಮಂಗಳವಾರ ಕೇಶವುಲು ಅಷ್ಟು ಹಣವನ್ನೂ ತಂದು ಯಾರಿಂದ ಗೋಪ್ಯ ವಾಗಿಡಬೇಕೆಂದಿದ್ದನೋ ಆಕೆಯ ಕೈಗೇ ಇಟ್ಟು ಹರಿಃ ಓಂ ಅಂದ

ಹಾಗಂದ್ರೆ ಎಂದು ಕೊಂಕಿನೋಡುತ್ತಾ ಆಕೆ ಹಣಹಿಡಿದುಕೊಂಡು ಕೇಳಿದಾಗ, ಕೇಶವಲು ಅಂದ. ಆ ಮುಸುರೆ ತಿಕ್ಕೋಳದ್ದು ಕೆಟ್ಟ ಮನಸ್ಸು ಅವಳನ್ನು ಕಳಿಸೋದು ಒಳ್ಳೆಯದು" ಎಂದು.

ನನಗೂ ಹಾಗೇ ಅನ್ನಿಸ್ತಾ ಇತ್ತು ಎಂದು ಆಕೆ ದನಿಗೂಡಿಸಿದಳು.

ಗುರುವಾರ ಆಕೆ ಜೋಮಾಲೆ ಸರ ಹಾಕ್ಕೊಂಡಿದ್ದಳು. "ಉಳಿತಾಯದ ಹಣ ಬೆಳ್ಳಿ ರೂಪಿನಲ್ಲಿ ಮಡಕೇಲಿರೋ ಬದಲು ಚಿನ್ನದ ರೂಪಿನಲ್ಲಿ ನನ್ನ ಮೇಲಿದ್ದರೆ: ಚೆನ್ನ ಅಲ್ವೇ ಅಂದ್ರೆ. "ಅಂದಳು ಆಕೆ.

ಮಡಕೆ ಕುಡಿಕೆ....ಎಲ್ಲಿದ್ದರೇನು ನನ್ನ ಕೈ ಬಿಟ್ಟಮೇಲೆ "ಎಂದುಕೊಂಡ ಕೇಶವಲು, ನಕ್ಕ.

—**ಕುಮಾಠ್**

ಪುರಾಣದ ನವ್ಯ ಕತೆಗಳು

ಸು ಭ ದ್ರೆ

"ಡ್ರೈವಿಂಗ್ ಲೈಸೆನ್ಸ್ ಇನ್ನೂ ಬರಲೇ ಇಲ್ಲ ಯಾಕೋ?" ಎಂದು ಸುಭದ್ರೆ ದೀಪಾವಳಿಗೆ ಮುಂಚೆ, ಮಳೆ ಬೀಳುತ್ತಿದ್ದ ಸಂಜೆ ಮನೆಯಲ್ಲೇ ಗೊಣಗಿಕೊಂಡಳಂತೆ. ಅಭಿಮನ್ಯುವಿಗೆ ಕೇಳಿಸಿತಂತೆ.

"ಅಮ್ಮಾ ತೇರು ಕಚೇರಿಗೆ ಹೋಗಿ ವಿಚಾರಿಸಿಕೊಂಡು ಬರಲೇ" ಎಂದು ಕೆನ್ನೆಯಲ್ಲಿ ಗುಳಿ ಬೀಳಿಸಿಕೊಳ್ಳುತ್ತಾ ಅಭಿಮನ್ಯು ಆದರದಿಂದ ಅಮ್ಮನನ್ನು ಕೇಳಿದನಂತೆ.

"ಬೇಡ! ಮಗು, ಹೊರಗೆ ಕಂಡಾಪಟ್ಟೆ ಮಳೆ ಬೀಳ್ತಾ ಇದೆ, ರಸ್ತೆಯೆಲ್ಲಾ ಕೆಸರಾಗಿರುತ್ತೆ. ನಾಯಿ ಕೂಡ ಹೊರಗೆ ಹೋಗಬಾರದಂತಹ ಹವಾ."

"ನಿಮ್ಮ ತಂದೇನೇ ಹೋಗಿ ವಿಚಾರಿಸಿಕೊಂಡು, ಲೈಸೆನ್ಸ್ ತರಲಿ ನಾನೇ ಡ್ರೈವ್ ಮಾಡಿಕೊಂಡು ಹೋಗಿ ದೀಪಾವಳಿಗೆ ಬಲಿಚಕ್ರವರ್ತಿನ ನೋಡಿ ಬರ್ತೀನಿ" ಎಂದಳಂತೆ ಸುಭದ್ರೆ.

ಅರ್ಜುನನಿಗೆ ಇದು ಕೇಳಿಸಿತಂತೆ. ಕೋಪ ಬಂತಂತೆ. ಆದರೂ ತೋರಿಸಿಕೊಳ್ಳದೆ, "ಹಾಗೇ ಮಾಡ್ತೀನಿ ಕಣೆ! ಎಂದು ಹೇಳಿ ಮಳೆಯಲ್ಲೇ ಹೊರಬಿದ್ದು ಶ್ರೀ ಮಲಯಾಳಕ್ಕೇ ಹೊರಟು ಹೋಗಿ, ಪ್ರಮಿಳೆಯನ್ನು ಮದುವೆಯಾಗಿ ಅಲ್ಲೇ ಇದ್ದುಬಿಟ್ಟನಂತೆ.

ಸುಭದ್ರೆಗೆ ಗಂಡನ ಮರು ಮದುವೆ ವಿಚಾರಕ್ಕೆ ಕಾರಣ ಏನು ಅಂತ ಆಮೇಲೆ ಗೊತ್ತಾಯ್ತಂತೆ.

* * * *

ಅಶ್ವಮೇಧ

ಧರ್ಮರಾಯ ಅಶ್ವಮೇಧ ಯಾಗ ಮಾಡಿದ್ದು ಎಲ್ಲರಿಗೂ ತಿಳಿದ ವಿಷಯ. ಅದೇ ಜಾಡಿನಲ್ಲಿ ಪರಿಕ್ಷಿತ್ ಮಹಾರಾಜ ಕೂಡ ಸರ್ಪಯಾಗಕ್ಕೆ ಮುಂಚೆ ಅಶ್ವಮೇಧ ಯಾಗ ಮಾಡಿದ್ದು ಎಲ್ಲರಿಗೂ ತಿಳಿಯದೆ ಇರಬಹುದು.

ಅವನ ಮೊಮ್ಮಗ ಚಕ್ರವರ್ತಿಯಾದಾಗ ಅರಮನೆಯ ಕುದುರೆ ಲಾಯ ಲೋಕದಲ್ಲೆಲ್ಲಾ ಪ್ರಸಿದ್ಧವಾಗಿತ್ತಂತೆ. ಜಾತಿ ಜಾತಿ ಕುದುರೆಗಳು ಹೇರಳವಾಗಿದ್ದು

ವಂತೆ. ಇವುಗಳನ್ನು ಓಡಿಸಿ ಬಾಜಿ ಕಟ್ಟಿ ಕಾಲ ಕಳೆಯುತ್ತಿದ್ದರಂತೆ; ಚಕ್ರವರ್ತಿ ಮತ್ತು ಅವನ ಸ್ನೇಹಿತರು.

ಸಂಜೆ ಅರಮನೆಗೆ ಹಿಂತಿರುಗುವಾಗ ಚಕ್ರವರ್ತಿ ಒಂದು ದಿನ ಉಂಗುರ ಇಲ್ಲದೆ, ಇನ್ನೊಂದು ದಿನ ಕಂಠೀ ಹಾರ ಇಲ್ಲದೆ, ಮತ್ತೊಂದು ದಿನ ಮುತ್ತಿನ ಸರ ಇಲ್ಲದೆ ಹೀಗೆ ಕುದುರೆ ಜೂಜಿನಲ್ಲಿ ಬಾಜಿ ಕಟ್ಟಿ ಕಳೆದುಕೊಂಡು ಬರುತ್ತಿದ್ದನಂತೆ.

ಕಡೆಗೆ ಕನೆ ಅಂಗಿ, ರುಮಾಲು, ರೇಷ್ಮೆ ಕಲಾಬತ್ತಿನ ಅಂಗವಸ್ತ್ರ ಕೂಡ ಕಳೆದುಕೊಂಡು ಬರಲು ಶುರುವಾಯ್ತಂತೆ. ಕಡೆಗೆ ಒಂದು ಸಂಜೆ ಕೌಪೀನಧಾರಿ ಯಾಗಿ ಚಕ್ರವರ್ತಿ ಹಿಂತಿರುಗಿದಾಗ, ಚಕ್ರವರ್ತಿನಿ ಕುಪಿತಳಾದಳಂತೆ.

ಕುದುರೆ ಲಾಯಕ್ಕೆ ಹೋದಳಂತೆ. ಎಲ್ಲಾ ಕುದುರೆಗಳನ್ನು ಸಾಮೂಹಿಕವಾಗಿ ಯಜ್ಞವಾಗುವಂತೆ, ಲಾಯಕ್ಕೇ ಬೆಂಕಿ ಹಚ್ಚಿದಳಂತೆ.

ಆ ದಿನ ಅನಂತರ, ಚಕ್ರವರ್ತಿ ಸುಖವಾಗಿ ಎಲ್ಲರ ಹಾಗೆ ಬಾಳಿಕೊಂಡಿದ್ದನಂತೆ.

ಆವತ್ತಿನಿಂದ ಅಶ್ವಮೇಧ ಯಾಗ ನಿಂತು ಹೋಯ್ತಂತೆ.

* * * *

ಮೇನಕೆ

ಸ್ವರ್ಗದಲ್ಲಿ ಒಂದು ಸಂಜೆ ಇಂದ್ರ ಸಭೆಯಿಂದ ಅಪ್ಸರೆಯರೆಲ್ಲರೂ ಹಿಂತಿರುಗಿದಾಗ ಮೇನಕೆ ಒಂದು ಶೀತಿಯಾಗಿದ್ದಳಂತೆ. ಊರ್ವಶಿ ಆಕೆಯನ್ನು ತನ್ನ ವಿಲಾಸಕ್ಕೆ ಕರೆದುಕೊಂಡು ಹೋಗಿ "ಯಾಕಕ್ಕ ಹೀಗೆ ದುಃಖಾಕ್ರಾಂತ ಳಾಗಿದ್ದಿ? ಏನು ಕಾರಣ, ಮೈ ಚೆನ್ನಾಗಿಲ್ಲವೇ ಮನಸ್ಸು ನೆಮ್ಮದಿಯಾಗಿಲ್ಲವೇ ಎಂದು ಪ್ರೀತಿಯಿಂದ ಕಾತುರಳಾಗಿ ಕೇಳಿದಳಂತೆ.

ಮೇನಕೆ ನಿಟ್ಟುಸಿರು ಬಿಟ್ಟು ಚೆನ್ನಾಗಿಯೇ ಇದೀನಿ ಅಂತ ತಿಳಿದುಕೊಂಡಿದ್ದೆ. ಲಕ್ಷಣವಾಗಿಯೇ ಭರತನಾಟ್ಯವಾಡಿದೆ ಈ ಸಂಜೆ ಅಂತ ಅಂದುಕೊಂಡಿದ್ದೆ, ಆದರೆ ಇಂದ್ರ ನನ್ನ ಕಣ್ಣನ್ನೇ ನೋಡುತ್ತಿದ್ದ, ಕಾಲುಗಂಟೆ ಕುಣಿದಾಗಲೂ ಸಾವಿರ ಕಣ್ಣಿನಿಂದ ಸಾವಿರಕಡೆ ನೋಡುವ ಧೀರ ಮುಖವನ್ನೊಂದೇ ದೃಷ್ಟಿಸಿದ ಅಂದ ಮೇಲೆ ಏನೋ ಆಗಿರಬೇಕು ನನ್ನ ದೇಹಕ್ಕೆ ಅಂತ ದುಃಖ ಕಣೇ" ಎಂದು ಗುಳುಗುಳು ಅತ್ತಳಂತೆ.

ನಿನ್ನ ನೋಡಿದಾಗ ನನಗೂ ಹಾಗೇ ಅನ್ನಿಸಿತು ಭೂಲೋಕಕ್ಕೆ ಕೆಲವು ಕಾಲ ಹೋಗಿ, ಪಶುವಿನಂತೇ ಇರುವ ಮನುಷ್ಯರೊಡನೆ ಇದ್ದು ಬಾ. ಆಗ ಹೊಸ ಕಳೆ, ನವರಂಗಿನಿಂದ ಬರುತ್ತೆ ಎಂದು ಊರ್ವಶಿ ಉಪದೇಶಮಾಡಿದಳಂತೆ.

ಅದಕ್ಕೇ ಅಂತೆ ಮೇನಕೆ ಭೂಲೋಕಕ್ಕೆ ಇಳಿದು ಗಡ್ಡ ಮೀಶೆಯ ರೌದ್ರಾವ ತಾರಿ ಮುಂಗೋಪಿ ವಿಶ್ವಾಮಿತ್ರನ ಜತೆ ಸಂಸಾರಮಾಡಿಕೊಂಡಿದ್ದು.